
ಅಚಲ

ಸೆಪ್ಟೆಂಬರ್ 1991 ಬೆಲೆ : ರೂ. 1-50



ನೇಮಿಚಂದ್ರ

ಗೌರಮ್ಮ

ಕೆ. ವೆಂ. ರಾಜಗೋಪಾಲ

ರಂಗನಾಯಕಮ್ಮ

ಹೇಮಲತಾ ಮಹಿಷಿ

ಸಂಪುಟ 7 ಸಂಚಿಕೆ 4

"ಅಚಲ" ಪತ್ರಿಕೆಯನ್ನು ಪಡೆಯ ಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹತ್ತು ರೂಪಾಯಿಗಳನ್ನು ಎಂ.ಓ./ಡ್ರಾಫ್ಟ್ ಮೂಲಕ ಕಳುಹಿಸಿ ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು. ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೆ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
26, 1ನೇ ಮೇನ್, ವೈಯಾಲಿ ಕಾವಲ್
ಬೆಂಗಳೂರು–560 003.

ಪುಸ್ತಕ ವಿಮರ್ಶೆಗಾಗಿ ಪುಸ್ತಕ ಕಳುಹಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.

ಸಂಪಾದಕ ಮಂಡಳಿ :
ಎನ್. ಗಾಯತ್ರಿ, ನೇಮಿಚಂದ್ರ, ಶೀಲಾ ಮಳಿಮಠ್
ಕಲೆ : ಚಂದ್ರನಾಥ್

ಚಂದಾ ವಿವರ :

ವಾರ್ಷಿಕ ಚಂದಾ	:	ರೂ. 10–00
ಬಿಡಿ ಪ್ರತಿ	:	ರೂ. 1–50
ವಿಶೇಷ ಪ್ರತಿ	:	ರೂ. 2–50
ಆಜೀವ ಚಂದಾ		
ವ್ಯಕ್ತಿಗಳಿಗೆ	:	ರೂ. 150–00
ಸಂಸ್ಥೆಗಳಿಗೆ	:	ರೂ. 200–00

Printed at : PRINTSWELL, 78, 3rd Main Road Nagappa Block, Srirampuram, Bangalore-21 & Published by Dr. G. Ramakrishna on behalf of Jagruthi Mahila Adhyayana Kendra
26, I Main, Vyalikaval, Bangalore-560003
Editor : N. GAYATRI

ತಿದ್ದುಪಡಿ

* ಕಳೆದ ಜುಲೈ ಸಂಚಿಕೆಯಲ್ಲಿ ಶ್ರೀ ಕು.ವೆಂ. ರಾಜಗೋಪಾಲ್ ಅವರ ಕವನ "ಅನುಪಮ ನೆನಪು" ಅಚಾತುರ್ಯದಿಂದಾಗಿ ತಪ್ಪು ರೂಪದಲ್ಲಿ ಹೊರಬಂದಿದೆ ಈ ತಪ್ಪಿಗಾಗಿ ಸಂಪಾದಕ ಮಂಡಲಿ ತನ್ನ ತೀವ್ರ ವಿಷಾದವನ್ನು ವ್ಯಕ್ತಪಡಿಸುತ್ತದೆ. ಆ ಪದ್ಯವನ್ನು ಸರಿಯಾದ ರೀತಿಯಲ್ಲಿ ಈ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ.

ಕಳೆದ ಸಂಚಿಕೆಯ "ಕಾನೂನು ಸಲಹೆ" ವಿಭಾಗದಲ್ಲಿ ಉಚಿತ ಕಾನೂನು ಪಡೆಯ ಬಯಸುವವರ ವಾರ್ಷಿಕ ವರಮಾನ ಮಿತಿ 4,800 ರೂ ಎಂದು ಪ್ರಕಟವಾಗಿದೆ ಆದರೆ ಅದರ ತಿದ್ದುಪಡಿ ಹೀಗಿರಬೇಕು.

"ಉಚಿತ ಕಾನೂನಿನ ನೆರವು ವಾರ್ಷಿಕ ವರಮಾನ 8000ರೂ ಕಡಿಮೆ ಇರುವ ವ್ಯಕ್ತಿಗೆ ದೊರೆಯುತ್ತದೆ.

ಹೇಮಲತಾ ಮಹಿಷಿ

ಕಾನೂನು

"ಕಾನೂನು ಸಲಹೆ" ಅಚಲ ಆರಂಭಿಸಿರುವ ಹೊಸ ಅಂಕಣ ಖ್ಯಾತ ವಕೀಲರೂ, ಲೇಖಕಿಯೂ ಆಗಿರುವ ಶ್ರೀಮತಿ ಹೇಮಲತಾ ಮಹಿಷಿ ಅವರು ನಿಮ್ಮ ಸಮಸ್ಯೆಗೆ ಪರಿಹಾರ ಸೂಚಿಸುತ್ತಾರೆ. ನಿಮ್ಮ ಸಮಸ್ಯೆ ಬಿಂಬಿಸುವ ಪ್ರಶ್ನೆಗಳು "ಅಚಲ" ನಂ. 26, 1ನೇ ಮೇನ್. ವೈಯಾಲಿಕಾವಲ್ ಬೆಂಗಳೂರು–560 003 ಇಲ್ಲಿಗೆ ತಲುಪಲಿ. ನಿಮ್ಮ ಹೆಸರು ವಿಳಾಸ ಸ್ಪಷ್ಟವಾಗಿರಲಿ. ನೀವು ಇಚ್ಛಿಸಿದರೆ ನಿಮ್ಮ ಹೆಸರನ್ನು ಗೌಪ್ಯವಾಗಿಡಲಾಗುವುದು.

ಈ ತಿಂಗಳ ಸಲಹೆಗೆ ಪುಟ 18 ನೋಡಿ.

ಸ್ತ್ರೀವಾದದ ಪ್ರಸ್ತುತತೆ

"ಸ್ತ್ರೀವಾದ" ಎಂದರೆ ನಮ್ಮ ಸುತ್ತಮುತ್ತಲ ಪರಿಸರದಲ್ಲಿ ಒಂದು ರೀತಿಯ ಅಸ್ಪೃಶ್ಯತೆಯ ಭಾವನೆಯೇ ಇದೆ. ಹಾಗೆಯೇ ಹೆಣ್ಣನ್ನು ಅಪಹಾಸ್ಯ ಮಾಡುವವರಿಗೆ "ಸ್ತ್ರೀವಾದಿಗಳು" ಒಂದು ನೆಪವಾದರೆ, ಮಹಿಳೆಯರನ್ನು ಕುರಿತು ಗಂಭೀರವಾಗಿ ಚಿಂತಿಸುವವರೆಂದು ಹಣೆಪಟ್ಟಿ ಕಟ್ಟಿಕೊಂಡ ಪರೂ ಕೂಡ ತಮಗೆ "ಸ್ತ್ರೀವಾದ" ಸೋಂಕದಂತೆ ಎಚ್ಚರಿಕೆ ವಹಿಸುತ್ತಾರೆ. ಸ್ತ್ರೀವಾದವೆನ್ನುವುದು ಬೌದ್ಧಿಕ ಕಸರತ್ತೇನಲ್ಲ, ಹಾಗೆಯೇ ಒಂದು ರೀತಿಯಲ್ಲಿ ಅದು ಪ್ರತ್ಯೇಕವಾದವೂ ಅಲ್ಲ. ಸ್ವಾಭಿಮಾನಿಯಾದ ಹೆಣ್ಣೊಬ್ಬಳು ತನ್ನ ಘನತೆ, ಗೌರವಗಳ ಬಗ್ಗೆ ಜಾಗೃತಳಾಗಿ ತನ್ನ ಸುತ್ತಣ ಪರಿಸರದಿಂದಲೂ ಅಂತಹುದೇ ಪ್ರತಿಕ್ರಿಯೆಯನ್ನು ಬಯಸುವಂತಹುದಾಗಿದೆ. ಪ್ರಜ್ಞಾವಂತ ಪುರುಷರು ಸ್ತ್ರೀಯರಿಗೆ ತಕ್ಕ ಘನತೆ ಗೌರವದಿಂದ ಹೆಣ್ಣನ್ನು ಕಾಣುವುದೂ ಕೂಡ ಸ್ತ್ರೀವಾದವಾಗುತ್ತದೆ. ಇದು ಮಾನವತಾವಾದದ ಒಂದು ಭಾಗ ಕೂಡ. ಹೀಗೆ ಹೇಳುವುದರಿಂದ ಸ್ತ್ರೀವಾದವನ್ನು ಸರಳಗೊಳಿಸಿದಂತಾಗುತ್ತದೆಯಾದರೂ, ಸ್ತ್ರೀವಾದ ಕೇವಲ ಅಕೆಡೆಮಿಕ್ ಆದ ಶಿಸ್ತಲ್ಲ, ಎಂಬುದು ಮುಖ್ಯವಾದದ್ದು. ಅದು ಒಂದು ಜೀವನ ವಿಧಾನ, ಕಲೆಯ ವಿಮರ್ಶಾ ಸಾಧನ. ಹಾಗೆಯೇ ಹೋರಾಟಕ್ಕೆ ಬೇಕಾದ ತಾತ್ವಿಕ ನೆಲೆಗಟ್ಟು ಕೂಡ.

ಹಾಗಾದರೆ ಸ್ತ್ರೀವಾದಿಗಳ ಬಗ್ಗೆ ಇರುವ ಅಸ್ಪೃಶ್ಯ ಭಾವನೆ, ಅವರನ್ನು ಹಾದಿ ತಪ್ಪಿದವರು, ಪುರುಷ ದ್ವೇಷಿಗಳು ಎಂದು ಪರಿಗಣಿಸುವ ಮನಸ್ಸಿಗೆ ಕಾರಣವಾದರೂ ಏನು? ಪಾಶ್ಚಾತ್ಯ ರಾಷ್ಟ್ರಗಳಲ್ಲಿನ. ಅದರಲ್ಲೂ ಕೆಲವು ಸ್ತ್ರೀವಾದಿ ಚಳುವಳಿಗಳನ್ನು ನಮ್ಮಲ್ಲಿ ತಪ್ಪಾಗಿ ವ್ಯಾಖ್ಯಾನಿಸಿಕೊಂಡು ಆರಂಭದಲ್ಲಿ ಸ್ತ್ರೀ ಪುರುಷ ಸಮಾನತೆಯ ಹೆಸರಿನಲ್ಲಿ ಕೆಲವೊಂದು ಅತಿರೇಕಗಳನ್ನು ನಡೆಸಿದ್ದುಂಟು ಕೇವಲ ಸ್ತ್ರೀ-ಪುರುಷ ಪಾತ್ರಗಳು, ವೇಷಭೂಷಣಗಳು. ಜೀವನದ ರೀತಿ ನೀತಿಗಳು ಅದಲು ಬದಲಾದ ಮಾತ್ರಕ್ಕೆ ಪುರುಷನೊಡನೆ ಸಮಾನತೆ ಸಾಧ್ಯವೆಂದೂ, ಲೈಂಗಿಕ ಸ್ವಚ್ಛಂದತೆಯನ್ನು ಸ್ತ್ರೀ ಸಮಾನತೆಗೆ ದಾರಿಯೆಂದೂ ಪ್ರಚುರ ಮಾಡಲಾಯಿತು ಇಂತಹ ವಿಚಾರಗಳನ್ನು ಪ್ರಚುರ ಪಡಿಸಲು ಪುರುಷರಾಧೀನದಲ್ಲಿದ್ದ ಪ್ರಸಾರ ಮಾಧ್ಯಮಗಳು ಕಾರಣವಾದವು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬ್ರಾ ಸುಟ್ಟ ಮಹಿಳೆಯರು, ಮನೆಗೆಲಸಕ್ಕೆ ಕೂಲಿ ಬೇಕೆಂಬ ಬೇಡಿಕೆಯಿತ್ತವರು ಲೈಂಗಿಕ ಸ್ವಚ್ಛಂದತೆಯನ್ನು ಪ್ರತಿಪಾದಿಸಿದ ಅತಿರೇಕದ ಸ್ತ್ರೀವಾದಿಗಳೂ ಇಂದು ಒಟ್ಟಾರೆಯಾಗಿ "ಸ್ತ್ರೀವಾದ"ವೆಂಬ ಶಬ್ದ ಅಪಮೌಲ್ಯವಾಗುವುದಕ್ಕೆ ಕಾರಣವಾಗಿದ್ದಾರೆ. ಗಂಡಸರ ಅನುಕರಣೆಯಲ್ಲಿ ಸ್ತ್ರೀವಾದ ಹುಡುಕಿ ಹೊರಟ ಕೆಲವು ಪಥಭ್ರಷ್ಟ ಮಹಿಳೆಯರ ಚಿಂತನೆಯನ್ನು "ಸ್ತ್ರೀವಾದ"ವೆಂದು ತಿಳಿದು ಗಾಭರಿಯಾಗ ಬೇಕಿಲ್ಲ. ಅದಕ್ಕೆ ಸ್ತ್ರೀಯರ ದಮನದ ಮೂಲಗಳನ್ನು ಗುರುತಿಸಿ, ಅದರ ವಿವಿಧ ಸ್ವರೂಪದ ಅಧ್ಯಯನವನ್ನು ನಡೆಸಿದಲ್ಲಿ ಸ್ತ್ರೀವಾದಕ್ಕೆ ತಾತ್ವಿಕ ನೆಲೆಗಟ್ಟು ದೊರೆಯುತ್ತದೆ. ಹಾಗೆಯೇ ಸ್ತ್ರೀ ಚಳುವಳಿಗೊಂದು ಮುನ್ನೋಟ ದೊರೆಯುತ್ತದೆ.

ಈಗ ನಾವು ಪರಿಭಾವಿಸುತ್ತಿರುವ "ಸ್ತ್ರೀವಾದ"ದ ಸ್ವರೂಪದ ಉಗಮವನ್ನು ಗುರುತಿಸುವುದು ಕಷ್ಟವಾದರೂ, ಅದರ ಬೇರುಗಳನ್ನು ಅರಸಲು ಚರಿತ್ರೆಯ ಆಳಕ್ಕೆ ಹೋಗಬೇಕಾಗುತ್ತದೆ. ಹದಿನೆಂಟನೆಯ ಶತಮಾನದ ಇಂಗ್ಲೆಂಡಿನ ಸಾಮಾಜಿಕ ಜೀವನ ಹಾಗೂ ಸಾಹಿತ್ಯಿಕ ಚಟುವಟಿಕೆಗಳಲ್ಲಿ ತನ್ನ ವಿಶಿಷ್ಟ ಪ್ರಭಾವವನ್ನು ಬೀರಿ ಸಾಕಷ್ಟು ಅಪವಾದನೆ, ದೂಷಣೆಗಳನ್ನು ಎದುರಿಸಬೇಕಾಗಿ ಬಂದರೂ ಜಗ್ಗದ ಮಹಿಳೆಯರ ಸ್ಥಾನಮಾನಗಳಿಗಾಗಿ ಅವಿರತವಾಗಿ ಹೋರಾಟ ನಡೆಸಿದ ದಿಟ್ಟ ವ್ಯಕ್ತಿ ಮೇರಿ ವುಲ್‌ಸ್ಟನ್ ಕ್ರಾಫ್ಟ್. ಹದಿನೆಂಟನೆಯ ಶತಮಾನದ ಜಡ್ಡುಗಟ್ಟಿದ ಧಾರ್ಮಿಕ ಪಾಳೆಯಗಾರತನ ಮತ್ತು ಸಾಮಾಜಿಕ ಕುಟಿಲತೆಗಳ ನಡುವೆ ತನ್ನ ಸ್ವರವನ್ನು ಎತ್ತರಕ್ಕೆ ಎತ್ತಿದ ಮೊದಲ ಮಹಿಳೆ ಮೇರಿ ಎಂಬುದನ್ನು ಗಮನಿಸಿದರೆ ಬಹುಶಃ ಅವಳ ಹಿರಿತನ ಗೊತ್ತಾದೀತು. "ಗಂಡಸನ್ನು ನನ್ನ ಸಹಭಾಗಿಯೆಂದು ಪ್ರೀತಿಸುತ್ತೇನೆ. ಆದರೆ ಅವನ ಭರ್ಜಿಯ ತಿವಿತವನ್ನು ನನ್ನ ಬಳಿ ಸಾರಗೊಡುವುದಿಲ್ಲ", ಎಂದು

ಮಹಿಳಾ ಹಕ್ಕಿನ ಸಮರ್ಥನೆ ಎಂಬ ತನ್ನೊಂದು ಕೃತಿಯಲ್ಲಿ 1791ರಲ್ಲೇ ಘೋಷಿಸಿದ್ದ ಮೇರಿ ಮುಖ್ಯವಾಗಿ ಖಾಸಗಿ ಆಸ್ತಿಯು ಹೇಗೆ ಮಾನವನ, ವಿಶೇಷವಾಗಿ ಮಹಿಳೆಯ ದಾಸ್ಯಕ್ಕೆ ಕಾರಣವಾಗಿದೆ ಎಂಬುದನ್ನು ತನ್ನ ಅನೇಕ ಕೃತಿಗಳಲ್ಲಿ ಪ್ರತಿಪಾದಿಸಿದ್ದಾಳೆ. ಇಂತಹ ಮೇರಿಯನ್ನು ಕುರಿತು 1947 ರಷ್ಟು ಈಚೆಗೆ ಬಂದ ಒಂದು ಪುಸ್ತಕದಲ್ಲಿ ಅವಳನ್ನ ತೆಗಳಿರುವ ರೀತಿ ಹೀಗೆ : "The mentally sick originator of the disease of feminism".

ನಂತರ ಸ್ತ್ರೀವಾದದ ವಿಶ್ಲೇಷಣೆಗೆ ಬಹು ಮುಖ್ಯವಾದ ಕೀಲಿ ಕೈ ಕೊಟ್ಟವನು ಫ್ರೆಡರಿಕ್ ಏಂಗೆಲ್ಸ್. ರಾಜ್ಯಯಂತ್ರವು ವರ್ಗಶೋಷಣೆಯ ಸಾಧನವಾದರೆ, ಕುಟುಂಬವು ಸ್ತ್ರೀಯನ್ನು ಶೋಷಿಸಲು ಪುರುಷನ ಸಾಧನವಾಯಿತು ಎಂಬ ಏಂಗಲ್ಸ್‌ನ ವಿಶ್ಲೇಷಣೆ ಮಹಿಳಾ ಸಮಸ್ಯೆಗೆ ಒಂದು ಭೌತವಾದಿ ಸೈದ್ಧಾಂತಿಕ ನೆಲೆ ಒದಗಿಸಿದೆ. ಆಯಾ ಸಮಾಜದ ಆರ್ಥಿಕ ಮತ್ತು ರಾಜಕೀಯ ಸಂಬಂಧಗಳಿಗೆ ಅನುಗುಣವಾಗಿ ಮಹಿಳೆಯ ಸ್ಥಾನಮಾನ ಸಮಾಜದಿಂದ ಸಮಾಜಕ್ಕೆ, ಕಾಲದಿಂದ ಕಾಲಕ್ಕೆ ಪರಿವರ್ತನೆಯಾಗುತ್ತಾ ಬಂದಿದೆ. ಖಾಸಗಿ ಆಸ್ತಿಯ ಉಗಮದೊಂದಿಗೆ ಸಮಾಜದಲ್ಲಿ ಮಹಿಳೆಯ ಸ್ಥಾನ ಗುಣಾತ್ಮಕವಾಗಿ ಇಳಿಮುಖವಾಯಿತು, ಎಂಬ ಏಂಗೆಲ್ಸ್‌ನ ವಿಶ್ಲೇಷಣೆಯನ್ನು ಬಹುಪಾಲು ಸ್ತ್ರೀವಾದಿಗಳು ಒಪ್ಪುತ್ತಾರೆ.

ತನ್ನನ್ನು "ಸ್ತ್ರೀವಾದಿ"ಯೆಂದು ಕರೆದುಕೊಳ್ಳದಿದ್ದರೂ ಸಿಮೋನ್-ದ-ಬೋವ್ವಾರ್ ಬರೆದ "ಸೆಕೆಂಡ್ ಸೆಕ್ಸ್" ಕೃತಿ ಸ್ತ್ರೀವಾದದ ವಿಶ್ಲೇಷಣೆಯಲ್ಲಿ ಗಮನಾರ್ಹವಾದ ಕೃತಿ, "ಸ್ತ್ರೀ ವಿಮೋಚನೆ ಜಗತ್ತಿನಾದ್ಯಂತ ಶ್ರಮ ಶಕ್ತಿಯನ್ನು ಅವಲಂಬಿಸಿದೆ. ಉತ್ಪಾದನಾ ಪ್ರಕ್ರಿಯೆಯಲ್ಲಿ ಮಹತ್ತರ ಕ್ರಾಂತಿಯಾದಾಗ ಮಾತ್ರ ಅವಳ ಸ್ಥಿತಿ ಗತಿ ಬದಲಾಗಲು ಸಾಧ್ಯ. ಉತ್ಪಾದನಾ ಸಾಧನಗಳ ಖಾಸಗಿ ಒಡೆತನ ತೊಲಗಿ ಅವುಗಳ ಸಾಮಾಜೀಕರಣ ಪೂರ್ಣಗೊಂಡಾಗ ಮಹಿಳಾ ವಿಮೋಚನೆಯ ಕನಸು ನನಸಾಗಬಲ್ಲುದು. ನನ್ನ ಈ ನಿಲುವಿನಿಂದಾಗಿಯೇ ನಾನು ಕೇವಲ ಸ್ತ್ರೀವಾದಿ ನೆಲೆಯಿಂದ ತಪ್ಪಿಕೊಂಡೆ ಎನ್ನುತ್ತಾಳೆ.

ಹಾಗೆಯೇ ಸ್ತ್ರೀವಾದಿ ವಿಮರ್ಶಕಿಯಾದ ಕೇಟ್ ಮಿಲೆಟ್‌ಳು ತನ್ನ Sexual Politicsನಲ್ಲಿ ಹೇಳಿರುವಂತೆ "ರಾಜಕೀಯ ಅಂತಸ್ಸತ್ವವಿರುವುದೇ ಅಧಿಕಾರದಲ್ಲಿ. ಎಂದು ಹೇಳಿರುವುದಲ್ಲದೆ ಸ್ತ್ರೀವಾದಿಗಳು ಪುರುಷರು ಚಲಾಯಿಸುವ ಅಧಿಕಾರದ ರೀತಿಯನ್ನು ವಿಶ್ಲೇಷಿಸಬೇಕು" ಎನ್ನುವ ಮಾತು ಮುಖ್ಯ. ಸ್ಥೂಲವಾಗಿ ಹೇಳಬೇಕೆಂದರೆ ಇದು ಪಿತೃಪ್ರಾಧಾನ್ಯತೆಯ, ಪುರುಷ ಪ್ರಾಧಾನ್ಯತೆಯನ್ನು ಕುರಿತ ಇನ್ನೊಂದು ಮಾತು ಅಷ್ಟೆ,

ಹೀಗೆ ಜಾಗತಿಕ ನೆಲೆಯಲ್ಲಿ ಮೂಡಿ ಬಂದ ಸ್ತ್ರೀವಾದ ಭಾರತದ ಸಂಧರ್ಭದಲ್ಲೂ ಇಲ್ಲಿನ ಚಿಂತನೆ ಚಟುವಟಿಕೆಗಳ ಮೇಲೆ ತನ್ನ ಪ್ರಭಾವ ಬೀರಿದೆ. ವಿಶ್ವದ ಹಲವಾರು ಕಡೆಗಳಲ್ಲಿ ನಡೆಯುತ್ತಿರುವ ಸ್ತ್ರೀವಾದಿ ಚಳುವಳಿಯ ಪರಿಚಯ ಭಾರತೀಯ ಸಮುದಾಯಕ್ಕೆ ಇದೆಯಾದರೂ ಭಾರತದ ಮಹಿಳಾ ಚಳುವಳಿ ಇದರ ನೇರ ನಕಲಲ್ಲ. ಹಾಗೆಯೇ ಸಮಾಜ ಬದಲಾವಣೆಗಾಗಿ ನಡೆಯುವ ಭಾರತದ ಮಹಿಳಾ ಚಳುವಳಿ ವಿದೇಶದಿಂದ ಆಮದಾಗಿ ತಂದದ್ದಲ್ಲ. ಈ ನೆಲದ ಅಗತ್ಯಕ್ಕೆ ತಕ್ಕಂತೆ ಚಳುವಳಿಯ ಸ್ವರೂಪ, ಉದ್ದೇಶಗಳೂ ರೂಪುಗೊಂಡಿವೆ. ಇಂದು ಭಾರತೀಯ ಸಮುದಾಯದಲ್ಲಿ ನಡೆಯುತ್ತಿರುವ ಅನೇಕ ಘಟನೆಗಳು ಮಹಿಳಾ ಶಕ್ತಿಯನ್ನು ಕ್ರೋಢೀಕರಿಸಲು ಸಾಧನಗಳಾಗಿವೆ. ಒಂದು ಕಡೆ ಹೆಚ್ಚುತ್ತಿರುವ ಹಲ್ಲೆಗಳು, ಇನ್ನೊಂದು ಕಡೆ ಹೆಚ್ಚುತ್ತಿರುವ ಜಾಗೃತ ಸ್ತ್ರೀ ಪ್ರಜ್ಞೆ, ಇವೆರಡರ ಸಂಮಿಶ್ರಣದಲ್ಲಿ ಮಹಿಳಾ ಹೋರಾಟಕ್ಕೆ ಹೊಸ ಆಯಾಮಗಳನ್ನು ಕಂಡುಕೊಳ್ಳಬೇಕಾಗಿದೆ. ಜೊತೆಗೆ ಆರ್ಥಿಕ ಕಾರಣಗಳಿಗಾಗಿ ಈಗಾಗಲೇ ಸಂಘಟಿತವಾಗಿರುವ ಸ್ತ್ರೀ ಕಾರ್ಮಿಕ ಶಕ್ತಿ ತಮ್ಮ ಕಾರ್ಯಕ್ಷೇತ್ರವನ್ನು ಆರ್ಥಿಕ ಬೇಡಿಕೆಗಳಾಚೆ ವಿಸ್ತರಿಸುವ ಉದ್ದೇಶ ಹೊಂದಿದರೆ ಆಗ ಮಹಿಳಾ ಚಳುವಳಿಗೆ ಸ್ತ್ರೀವಾದಕ್ಕೆ ನಿಜವಾದ ಅರ್ಥ, ಶಕ್ತಿ ಬರುತ್ತದೆ.

□ ಎನ್. ಗಾಯತ್ರಿ

ಕಾವ್ಯ

ಕ್ಯೂಬಾ

ಪುಟ್ಟ ಹುಡುಗಿ
ಮುಖದಲ್ಲಿ ಮುಡಿದುಕೊಂಡ
ತುರುಬಿಗೆ ಅದೇ ನೋವು ನಗೆ
ಜೊತೆಗೆ ಟ್ಯೂಲಿಪ್ ಪಕಳೆ
ಎದೆಯಲ್ಲಿ ಸದಾ ಹಾಡ ಸಾಲು
ಬಂದೂಕು ತುದಿಗೆ ನಗೆ ಮಲ್ಲಿಗೆ ಎಸಳು
ಊರ ತುಂಬಾ ಯುಗಾದಿ ಹಸಿರು ತೋರಣ

ಎದೆಯಾಳದೊಳಗೆ
ಅವ್ವ ಬಚ್ಚಿಟ್ಟುಕೊಂಡ ಯಾತನೆ
ಮೇಲೆ ಬೆಚ್ಚನೆಯ ಮಡಿಲ ಕಾವು
ಕಾಣುವುದು ನೆಲದ ಹಸಿರ ಎಳೆ
ಒಳಗೆ ಮಾತ್ರ ತಲ್ಲಣದ ಮಳೆ

ಕೆಂಪು ಟೋಪಿಯ ಹರಕಲು ಗಡ್ಡದ
ಸೈಕಲ್ ತುಳಿಯುವ ಪಡ್ಡೆ 'ಚೆ'
ರಾಗಿ ತೆನೆಗಳ ಹೊತ್ತು ಬೀಗಿದ
ಹೊಲದ ಮಧ್ಯೆ ಗಾಲಿ ಓಡಿಸಿದಷ್ಟೇ ಸಲೀಸಾಗಿ
ಕ್ರಾಂತಿ ಚಕ್ರ ಸುತ್ತಿಸಿದ್ದು
ಕೆಂಪು ತುಟಿ ಬಿರಿದು ಹೂನಗೆ ಎಸೆದವರಿಗೆ
ಕಣ್ಣು ಮಿಟುಕಿಸಿ ಕೆಣಕಿದ್ದು

ಅದೇ ಹಾಡು ಜೋಕಾಲಿ ಬೀಕುತ್ತಾ
ಇದೀಗ ಅದೇ ಟೋಪಿಯ ಹರಕಲು ಗಡ್ಡದ
ಈತ ಎದೆಯೊಳಗೆ ಬೀಜ ಬಿತ್ತುತ್ತಾನೆ
ತೆನೆ ತೆಗೆಯುತ್ತಾನೆ. ಬಸಿರೊಳಗೆ ಮುದ್ದು
ನಗೆ ಬೆಳೆಯುತ್ತಾನೆ
ಕ್ಯೂಬಾದ ಕಣ್ಣೊಳಗೆ ಇನಿಯರ
ಕಣ್ಣು ಹೊಳಪ ತೀಡುತ್ತಾನೆ.

❋ ಜಿ. ಎನ್. ಮೋಹನ್

——○ ○—ಕಾನೂನು ಸಲಹೆ—○ ○ ——

ವಿಚ್ಛೇದನ : ಮಗು ಯಾರಿಗೆ ?

ಪ್ರಶ್ನೆ ; ನನಗೆ ಮದುವೆಯಾಗಿ ಮೂರು ವರ್ಷಗಳಾಗಿವೆ. ಒಂದೂವರೆ ವರ್ಷದ ಗಂಡು ಮಗುವಿದೆ. ಇತ್ತೀಚೆಗೆ ನನ್ನ ಗಂಡನ ರೀತಿ ಸರಿಯಾಗಿಲ್ಲ ಅನಗತ್ಯವಾಗಿ ರೇಗುವುದು ಬೇರೆ ಮಹಿಳೆಯರನ್ನು ಹೊಗಳುವುದು ಇತ್ಯಾದಿ ಬದಿಲು ಮಾತಾಡಿದರೆ ಮನೆ ರಣರಂಗ. ವಿಚ್ಛೇದನದತ್ತ ಯೋಚನೆ ಬಂದಿದೆ. ಆದರೆ ಮಗುವಿನ ಸೆಳೆತ ಗಂಡನಿಂದ ದೂರ ಸರಿದರೆ ಮಗು ನನಗೆ ದಕ್ಕಬಹುದೆ? ನಾನು ಉದ್ಯೋಗಿಯಲ್ಲ.

ಮಂಡ್ಯ ... ಸಂಧ್ಯಾ

ಉತ್ತರ ; ಐದು ವರ್ಷ ತುಂಬುವವರೆಗೆ ಮಗು ತಾಯಿಯ ಬಳಿ ಇರಬೇಕೆಂಬ ನಿಯಮವಿದೆ. ಅನಂತರ ಮಗುವಿನ ಹಿತದೃಷ್ಟಿಯಿಂದ ಮಗು ಯಾರ ಬಳಿ ಇರಬೇಕೆನ್ನುವುದನ್ನು ನ್ಯಾಯಾಲಯ ನಿರ್ಧರಿಸುತ್ತದೆ. ನೀವು ಉದ್ಯೋಗಿಯಲ್ಲದಿದ್ದರೆ ಗಂಡನಿಂದ ಜೀವನಾಂಶವನ್ನು ಪಡೆಯಬಹುದು, ಮಗುವಿಗೂ ಜೀವನಾಂಶ ಕೇಳಬಹುದು.

ಪ್ರಶ್ನೆ : ವರದಕ್ಷಿಣೆ ಸಾವಿನಂಥ ಪ್ರಕರಣಗಳ ದೂರು ದಾಖಲೆ, ಸಲಹೆಗೆ ತಾಲ್ಲೂಕು, ಜಿಲ್ಲಾ ಮಟ್ಟಗಳಲ್ಲಿ ಏನಾದರೂ ವ್ಯವಸ್ಥೆ ಇದೆಯೆ ? ಕಾನೂನು ಸಲಹೆಗೆ ಕೂಡ (ಉಚಿತ) ನಾವು ನಗರಕ್ಕೆ ಧಾವಿಸಬೇಕೆ ?

ಚಿಕ್ಕಮಗಳೂರು ... ಗೀತಾ

ಉತ್ತರ : ಪ್ರತಿ ಜಿಲ್ಲೆಯಲ್ಲೂ ಜಿಲ್ಲಾ ಕಾನೂನು ಸಲಹಾ ಮಂಡಲಿಗಳಿವೆ. ಅಲ್ಲಿ ಉಚಿತ ಕಾನೂನಿನ ನೆರವು ದೊರೆಯುತ್ತದೆ. ಅದರೊಂದಿಗೆ ಅನೇಕ ಮಹಿಳಾ ಸಂಘ-ಸಂಸ್ಥೆಗಳು ನೊಂದ ಮಹಿಳೆಯರಿಗೆ ಸಹಾಯ ಮಾಡುತ್ತವೆ, ಅನುಸೂಚಿತ ಜಾತಿ ಮತ್ತು ಬುಡಕಟ್ಟಿನ ಜನಾಂಗದವರಿಗೆ ಉಚಿತ ಕಾನೂನಿನ ನೆರವು ಪಡೆಯಲು ಯಾವುದೇ ವರಮಾನದ ಮಿತಿ ಇಲ್ಲ. ಆದರೆ ಉಳಿದವರಿಗೆ 4,800 ರೂ. ವಾರ್ಷಿಕ ವರಮಾನ ವಿದ್ದರೆ ಉಚಿತ ಕಾನೂನಿನ ನೆರವು ದೊರೆಯುವುದಿಲ್ಲ.

☐ ಹೇಮಲತಾ ಮಹಿಷಿ

ಹೆಚ್. ವಿ. ಸಾವಿತ್ರಮ್ಮನವರ ಕತೆಗಳು
- ಒಂದು ವಿವೇಚನೆ

☐ ಕೆ. ಸತ್ಯನಾರಾಯಣ

ಸಾವಿತ್ರಮ್ಮನವರ ಕತೆಗಳನ್ನು ಇಲ್ಲಿ ಮಾತನಾಡುವ ಉದ್ದೇಶಕ್ಕಾಗಿಯೇ ನಾನು ಓದಿದ್ದು. ಎನ್. ಗಾಯತ್ರಿಯವರ ಸೂಚನೆ ಒತ್ತಾಯಗಳ ಹಿನ್ನೆಲೆಯಲ್ಲಿ ನನ್ನ ಓದು ಪ್ರಾರಂಭವಾಯಿತು. ಹೀಗೆ ಓದುತ್ತಲೇ ಬಂದ ಸಮಸ್ಯೆಗಳನ್ನು ಆಲೋಚನಾ ಸರಣಿಯನ್ನು ಹಂಚಿಕೊಳ್ಳುವುದೇ ಈ ಲೇಖನಕ್ಕೆ ಒಳ್ಳೆಯ ಪೀಠಿಕೆಯಾಗಬಹುದೆಂದು ನನ್ನ ಅನಿಸಿಕೆ.

ಒಬ್ಬ ಲೇಖಕನ, ಕಲಾವಿದನ, ಚಿಂತಕನ ಬಗ್ಗೆ ಈವತ್ತಿನ ತನಕ ಚರ್ಚೆ ನಡೆದಿಲ್ಲದಿದ್ದರೆ ಸಾಂಸ್ಕೃತಿಕ ವಲಯ ಆತನಿಗೆ ಮನ್ನಣೆ ನೀಡಲಿಲ್ಲವೆಂಬುದು ಅರ್ಥವೇ ಅಲ್ಲ. ಒಬ್ಬ ಲೇಖಕ. ಕಲಾವಿದ. ಚಿಂತಕನ ಬಗ್ಗೆ ತಳೆಯುವ ನಿಲುವು ಅಲ್ಲವೇ ಅಲ್ಲ. ಒಬ್ಬ ಶ್ರೇಷ್ಠ ಲೇಖಕನಲ್ಲಿ, ಪ್ರಾತಿನಿಧಿಕ ಕಲಾವಿದನಲ್ಲಿ ಅವನ ಕಾಲದ ಬಗ್ಗೆ ಎಲ್ಲ ಲೇಖಕರು, ಕಲಾವಿದರು ಸೇರಿಕೊಂಡುಬಿಟ್ಟಿರುತ್ತಾರೆ ಅಂತರ್ಗತವಾಗಿರುತ್ತಾರೆ. ಬೇಂದ್ರೆಯವರ ಕಾವ್ಯದ ಚರ್ಚೆಯೆಂದರೆ ನವೋದಯದ ಚರ್ಚೆಯೂ ಆಗುವುದು ಈ ಕಾರಣಕ್ಕೆ ಅವರನ್ನು ಒಪ್ಪುವುದೇದರೆ, ಪ್ರಶ್ನಿಸುವುದೆಂದರೆ ಅವರೊಡನೆ ಬರೆದು, ಅವರ ಎತ್ತರವನ್ನು ಸಾಧಿಸಲಾರದೆ ಹೋದ, ಅವರಲ್ಲಿ ಲೀನವಾದ ಎಲ್ಲರನ್ನೂ ಚರ್ಚಿಸುವುದು ಎಂದು ಅರ್ಥ.

ಸಾವಿತ್ರಮ್ಮನವರ ಕತೆಗಳನ್ನು ಓದಲು ಪ್ರಾರಂಭಿಸಿದ ತಕ್ಷಣವೇ ನನಗೆ ಹೊಳೆದದ್ದು, ನಮ್ಮ ಮುಖ್ಯ ಲೇಖಕರೆಲ್ಲ-ಹೆಂಗಸಿನ "ತಾಯ್ತನದ" ಬಗ್ಗೆಯೇ ಬರೆದವರು. ಅವಳ "ಪಾಲನಾ" ಪ್ರವೃತ್ತಿಯ ಬಗ್ಗೆಯೇ ಬರೆದವರು, ಬರೆಯುತ್ತಿರುವವರು. ಆದರೆ ಆ ಕಾಲದಲ್ಲಿ ಬರೆಯುತ್ತಿದ್ದ ಲೇಖಕಿಯರು ಮಾತ್ರ ತಾಯ್ತನ. ಪಾಲನಾ ಪ್ರವೃತ್ತಿ. ಇವುಗಳಿಂದಾಚೆಗೂ ಹೋಗಿ ತಮ್ಮ ಕಷ್ಟ, ಸುಖ, ನೋವು. ನಲಿವು. ಬಿಡುಗಡೆಯ ಆಸೆ ಬಿಡುಗಡೆಯ ಕಷ್ಟ ಇವುಗಳ ಬಗ್ಗೆ ಅರ್ಥತೆಯಿಂದ ಬರೆದುಕೊಂಡಿದ್ದಾರೆ. ಸಾವಿತ್ರಮ್ಮನವರ ಬರವಣಿಗೆ ಕೂಡ ಅದೇ ಧೋರಣೆಯದು. ಕಾರಂತರ ಅಜ್ಜಿಯರು ಹೆಂಗಸರ ಬಗ್ಗೆ. ಕೃತಿಯ ಬಗ್ಗೆ ಕುವೆಂಪುಗಿರುವ ಆಧ್ಯಾತ್ಮಿಕ ಧೋರಣೆ, ಮಾಸ್ತಿಯ ಚಿಕ್ಕಮ್ಮ, ಶೇಷಮ್ಮಂದಿರು ಇವರುಗಳ ಜಗತ್ತಿಗೆ ಬದಲಾಗಿ ಬೇರೊಂದು ಜಗತ್ತು ನಮಗೆ ಲೇಖಕಿಯರಲ್ಲಿ ಸಿಗುತ್ತಿದೆ. ಆ ಕಾರಣಕ್ಕಾದರೂ ನಾವು ಲೇಖಕಿಯರನ್ನು ಓದಬೇಕು.

ಕೌಟುಂಬಿಕ ಜೀವನವನ್ನು, ಅದರ ಎಲ್ಲ ಆಯಾಮಗಳಲ್ಲೂ ಪಾಲನಾ ಪ್ರವೃತ್ತಿಯನ್ನು ವಿಜೃಂಭಿಸುವ ಲೇಖಕರಂತಲ್ಲದೆ ಈವತ್ತಿಗೂ ಅಧಿಕೃತವೆನ್ನಿಸುವಂತೆ ಬರೆಯಬಲ್ಲವರು ಲೇಖಕಿಯರೇ. ಈ ಮಾತು ಸಾಧಾರಣ, ಜನಪ್ರಿಯ ಲೇಖಕಿಯರ ಬಗ್ಗೆಯೂ ಕೂಡ ನಿಜ. ಗಂಡಸಿನ ದೃಷ್ಟಿಯಿಂದ ಕೌಟುಂಬಿಕ ಜೀವನ ಛಿದ್ರಗೊಳ್ಳುತ್ತದೆ ಎಂದು ಹೇಳುವಂತಹ ಸಮಯದಲ್ಲೇ ಲೇಖಕಿಯರು ಕೌಟುಂಬಿಕ ಜೀವನವೇ ಅಧಿಕೃತವೆನ್ನುವಂತೆ ಬರೆಯುತ್ತಿದ್ದಾರೆ. ಕೌಟುಂಬಿಕ ವ್ಯವಸ್ಥೆಯ ಮಿತಿಗಳನ್ನು ಹೇಳುವ ಅವರ ಕಥೆಗಳು-ಬರವಣಿಗೆಗಳು ಕೂಡ ಕೌಟುಂಬಿಕ ವ್ಯವಸ್ಥೆ ಹಸನಾಗಲೀ ಎಂಬ ಆಸ್ಥೆಯಿಂದಲೇ ಹುಟ್ಟಿದಂತೆ ಕಾಣುತ್ತದೆ, ಬೇರೆ ಬೇರೆ ಧೋರಣೆಯ ಲೇಖಕಿಯರಾದ ವೈದೇಹಿ, ಸರ್ವಮಂಗಳ, ಗಂಗಾ ಪಾದೇಕಲ್ ಇಂತಹವರ ಬರವಣಿಗೆಗಳು ನನ್ನ ಮಾತುಗಳ ಹಿಂದಿವೆ. ಈ ಮಾತುಗಳ ಹಿನ್ನೆಲೆಯಲ್ಲಿ ಮುಂದಿನ ಭಾಗಗಳನ್ನು ಓದಿಕೊಳ್ಳಬೇಕೆಂಬುದು ನನ್ನ ಸೂಚನೆ.

೨

ಸಾವಿತ್ರಮ್ಮನವರ ಕತೆಗಳ ಆಶಯ ನಿರೂಪಣಾ ತಂತ್ರ ಇವುಗಳನ್ನೆಲ್ಲ ಇವರ ಒಟ್ಟು ಕಥಾ ಲೋಕದಿಂದ ತಿಳಿಯಬೇಕಷ್ಟೇ ವಿನಹ, ಆಶಯ,-ತಂತ್ರ-ಕಾಳಜಿ ಎಲ್ಲವೂ

ಸಮರ್ಥವಾಗಿ ವ್ಯಕ್ತವಾದಂತಹ, ಇವರ ಸಿದ್ಧಿಯನ್ನು ಸೂಚಿಸುವಂತಹ "ಒಂ ದೆ ರೆ ಡು" ಕತೆಗಳಿಂದಲ್ಲ, ಈ ರೀತಿಯ ಸಿದ್ಧಿ ಶಿಖರಗಳಿಂದ ದೂರವಿರುವಂತೆ ಕಾಣುವ ಇವರ ಬರವಣಿಗೆ. ಅಂದರೆ ಕಥಾಲೋಕವನ್ನು ಒಟ್ಟಾರೆ ನೋಡಿದಾಗ ಮಾತ್ರ ಕೆಲವು ಮುಖ್ಯವಾದ ಪ್ರಶ್ನೆಗಳನ್ನು ಎತ್ತಬಹುದು.

ಬಹುಕಾಲ ಬರವಣಿಗೆಯನ್ನು ಅಭಿವ್ಯಕ್ತಿ ಮಾಧ್ಯಮ ಮಾಡಿಕೊಳ್ಳುವ ಎಲ್ಲ ಬರಹಗಾರರಂತೆ ಇವರೂ ಕೂಡ "ಗೀಳಿನ" ಬರಹಗಾರರೇ. ಇವರ ಎಲ್ಲ ಕತೆಗಳಲ್ಲೂ ಮತ್ತೆ ಮತ್ತೆ ಎದುರಾಗುವ ಪ್ರಶ್ನೆ ಒಂದೇ ದಾಟಿಯದು ಹೆಣ್ಣಿನ ಸಾರ್ಥಕತೆ ಎಲ್ಲಿ, ದಾಂಪತ್ಯ, ಮದುವೆಯ ಚೌಕಟ್ಟಿನಲ್ಲಿ ಮಾತ್ರವೇ? ಹೆಣ್ಣು ಗಂಡಿನ ಸಂಬಂಧ ಈ ಚೌಕಟ್ಟಿನೊಳಗೆ ಪರಿಪಕ್ವವಾಗಬೇಕೆ? ಅಥವಾ ಹೊರ ದಾರಿಯಿದೆಯೇ ಇದು ಎಲ್ಲ ಗಂಭೀರ ಲೇಖಕಿಯರು ಕೇಳಿಕೊಳ್ಳುವ ಪ್ರಶ್ನೆಯಾದರೆ, ಇವರ ಕಥಾಲೋಕಕ್ಕೆ ವಿಶಿಷ್ಟವಾದ ಒಂದೆರಡು ಪ್ರಶ್ನೆಗಳು ಉಂಟು. ವಿದ್ಯೆ, ವೃತ್ತಿ ಪರಿಣತಿ-ಇವೆಲ್ಲವೂ ಹೆಣ್ಣಿನ ಬಿಡುಗಡೆಯ ದಾರಿಗಳೇ ಆದರೆ ಆ ಬಿಡುಗಡೆಯ ಸಮಯದಲ್ಲಿ, ಆವಳು ತನಗೇ ವಿಶಿಷ್ಟವಾದ ಭಾವಲೋಕವನ್ನು ಬಿಟ್ಟುಕೊಡಬೇಕೇ? ಹೆಚ್ಚಿನ ಲೇಖಕಿಯರಂತೆ ಇವರು ಗಂಡಸರನ್ನು ದೂರುವುದಿಲ್ಲ. ತನಗೆ ಬೇಕಾದ ಹೆಣ್ಣನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಗಂಡಸು ಕೂಡ ಅಸಹಾಯಕನೇ. ಆದರೆ ಆ ಅಸಹಾಯಕತೆ ಬಗ್ಗೆ ಅವನಿಗೆ ವಿಷಾದವಿದೆಯೋ ಇಲ್ಲವೋ ಎಂಬುದು ಪತ್ತೆಯಾಗುವುದೇ ಕಷ್ಟ. ಅಕಸ್ಮಾತ್ ವಿಷಾದ ವಿದ್ದರೂ ಈವತ್ತಿನ ಸಾಮಾಜಿಕ ಸನ್ನಿವೇಶದಲ್ಲಿ ಅವನು ಲಾಭವನ್ನಂತೂ ಪಡೆದೇ ಪಡೆಯುತ್ತಾನಲ್ಲ,?

ಈ ಪ್ರಶ್ನೆಗಳನ್ನೆಲ್ಲ ಈ ಲೇಖಕಿಯ ಗೀಳಿನ ಒಂದು ಭಾಗ. ಒಂದು ಭಾಗ ಏಕೆಂದರೆ ಗೀಳಿನ ಲೇಖಕಿಯರಲ್ಲಿ ತ್ರಿವೇಣಿ ಕಾಣುವಂತಹ ಶೋಧನೆ ಇವರಲ್ಲಿ ಕಾಣುವುದಿಲ್ಲ ಅಥವಾ ವೀಣಾ ಶಾಂತೇಶ್ವರರಂತೆ ಹೊಸ ದೃಷ್ಟಿಕೋನಕ್ಕೆ ಹಂಬಲಿಸುವುದಿಲ್ಲ. ಕಂಡದ್ದನ್ನು ಕಂಡಹಾಗೆ ಮಂಡಿಸಿಬಿಡುವ, ಒಪ್ಪಿಸಿಬಿಡುವ ಶೈಲಿ ಇವರದು. ಹಾಗಾಗಿ ಕತೆ ಹೇಳುವ ಕ್ರಮದಲ್ಲಿ ಹೊಸದೇನನ್ನಾದರೂ ಪ್ರಯತ್ನಿಸುವ ಪ್ರಯೋಗಶೀಲತೆಯೂ ಇಲ್ಲ,

ಹೀಗಿದ್ದೂ ಗಮನಿಸಬೇಕಾದ ಸಂಗತಿಯೆಂದರೆ. ಮಂಡನೆಯಲ್ಲಿರುವ ಅಚ್ಚುಕಟ್ಟು. ನನಗೆ ತಿಳಿದ ಹಾಗೆ ಅಧ್ಯಾಯಗಳನ್ನು. ಭಾಗಗಳನ್ನು ಜೋಡಿಸಿ ಕತೆ ಬರೆದಿರುವ (ಅವರ ಕಾಲದ) ಲೇಖಕಿ ಇವರೊಬ್ಬರೇ. ಹಾಗೆಯೇ ನೀಳ್ಗತೆಗಳನ್ನೂ ಕೂಡ ಕಂಡದ್ದೆಲ್ಲವನ್ನು ಸುಮ್ಮನೆ ಮಂಡಿಸಿಬಿಡುತ್ತಾರಲ್ಲ, ಎಂದೆನಿಸಿದರೂ ಎಲ್ಲಾ ಕಪ್ಪು ಬಿಳುಪಿನ ಚಿತ್ರಣವಲ್ಲ,

ಇವರ ಮಂಡನಾ ಕ್ರಮದಲ್ಲಿ ಎರಡು ಸ್ವರಗಳಿವೆ, ಒಂದು ಮರುಕದ ಸ್ವರ, ಇನ್ನೊಂದು ತಿಳುವಳಿಕೆಯ ಸ್ವರ. ಎರಡೂ ಒಟ್ಟಿಗೆ ಬೆರೆತ ಕತೆಗಳಲ್ಲಿ ಪಾತ್ರಗಳ ಒಳತೋಟಿ, ಕತೆಯ ವಿವರಗಳಿಗೆ ಹೆಚ್ಚು ಗಮನವಿರುತ್ತೆ. ಮರುಕದ ಸ್ವರದಲ್ಲೇ ಬರೆದಾಗ ಓದುಗರನ್ನು ಗೆಲ್ಲುವ ಆಸೆಯಿದ್ದರೆ, ತಿಳುವಳಿಕೆಯ ಸ್ವರದಲ್ಲಿ ಬರೆದಾಗ ಆಶಯಗಳನ್ನು ಮೆರೆಸುವ ಆಸೆ ಕಂಡುಬರುತ್ತದೆ. ಎರಡೂ ಸ್ವರಗಳು ಚೆನ್ನಾಗಿ ಬೆರೆಯುವುದು ಅವರ ನೀಳ್ಗತೆಗಳಲ್ಲಿ ಕಿರು ಕಾದಂಬರಿಗಳಲ್ಲಿ (ಉದಾ : ಪಾತು ಕತೆ), ಇದಕ್ಕೆ ಸಂಬಂದಪಟ್ಟಹಾಗೆ ಇನ್ನೂ ಒಂದು ಮಾತನ್ನು ಹೇಳಬಹುದು. ಎಲ್ಲಿ ಅವರ ವಿಚಾರ ಪ್ರಗತಿಪರವಾಗಿದೆ, ಹೊಸ ದೃಷ್ಟಿ ಕೋನದ್ದು ಎಂದೆನಿಸುತ್ತದೋ, ಎಲ್ಲಿ ಅವರ ಆಯಗಳು ನಮಗೆ ಸ್ವೀಕಾರಾರ್ಹವಾಗಿ ಕಾಣುತ್ತವೆಯೋ ಅಂತಹ ಕತೆಗಳಲ್ಲಿ ವಿವರಣೆ, ಒಳತೋಟಿಯ ನಿರ್ವಹಣೆ ಸಮರ್ಥವೆನಿಸುವುದಿಲ್ಲ. (ಮೋನಕೆ, ದಮಯಂತಿ ಇಂತಹ ಕಥೆಗಳಲ್ಲಿ) ಆದರೆ ಎಲ್ಲಿ ಅವರು ಕಥಾವಸ್ತುವನ್ನು ಸಾಂಪ್ರದಾಯಿಕ ವಿಚಾರಗಳ ಚೌಕಟ್ಟಿನಲ್ಲಿ ನಿರ್ವಹಿಸಲು, Resolve ಮಾಡಲು ಪ್ರಯತ್ನಿಸುತ್ತಾರೋ ಅಲ್ಲಿ ವಿವರಣೆಯ ಶಕ್ತಿಯೇ ಜಾಸ್ತಿ, ಪಾತ್ರಗಳ ಒಳತೋಟಿಯ ದರ್ಶನವೂ ಜಾಸ್ತಿ. ಅಷ್ಟೇ ಅಲ್ಲ ಲೇಖಕಿ ನಂಬಿದ ವಿಚಾರಗಳ ಪರಿಶೀಲನೆಯೂ ಕೂಡ ಕತೆಯ ಶರೀರದೊಳಕ್ಕೆ ಸೇರಿಕೊಳ್ಳುತ್ತದೆ (ಬಿಸಿಲುಗುದುರೆ, ಮರು ಮದುವೆ ಇಂತಹ ಕತೆಗಳಲ್ಲಿ).

ಮೇಲೆ ಹೇಳಿದಂತಹ ಕತೆಗಳಲ್ಲಿ ಅವರು ಸೂಚಿಸುವ ಒಂದೆರಡು ಸಂಗತಿಗಳನ್ನು ಪರಿಶೀಲಿಸಬಹುದು. ಹೆಣ್ಣಿನ Vulnerability ದೇಶಕಾಲಗಳ ಗಡಿಗಳನ್ನು ಮೀರಿದ್ದು ಎಂದು ಎಲ್ಲ ಲೇಖಕಿಯರು ಬರೆದರೆ ಅದರ ಜೊತೆಗೆ ಹೆಣ್ಣಿಗೇ ವಿಶಿಷ್ಟವಾದ Persecution Complex

(ಯಾತನಾ ಮನೋಭಾವ)ನ್ನು ಕೂಡ ಇವರು ಪರಿಶೀಲ ನೆಗೆ ತೆಗೆದುಕೊಳ್ಳುತ್ತಾರೆ. ಹೆಣ್ಣಿಗೆ ತನಗಿರುವ ಕೀಳಾದ ಸ್ಥಾನಮಾನದ ಅರಿವು ಎಷ್ಟಿದೆಯೆಂದರೆ ಅದು ಎಷ್ಟು Internalise ಆಗಿದೆಯೆಂದರೆ, ಇನ್ನೊಂದು ಹೆಣ್ಣು Liberate ಆಗುವ ಹೊಸ ಹೆಜ್ಜೆ ಹಾಕುವ ಸೂಚನೆ ಕಂಡ ತಕ್ಷಣ ಇವಳು ಭಯ ಪಡುತ್ತಾಳೆ, ಗೊಂದಲಕ್ಕೊಳಗಾಗುತ್ತಾಳೆ (ಲಕ್ಷ್ಮಿ, ಮೇನಕೆ ಇಂತಹ ಕತೆಗಳಲ್ಲಿ ಹೆಂಗಸಿಗೆ ಒದಗಿ ಬರುವ ದುಸ್ಥಿತಿಗೆ ಹೆಂಗಸಿನ ಪ್ರತಿಕ್ರಿಯೆಯತ್ತ ನೋಡಿ) ಈ ಅಂಶದ ಸೂಚನೆಯನ್ನು ಕೂಡ ಬೇರೆ ಬೇರೆ ಲೇಖಕಿಯರಲ್ಲಿ, ಪುರಾಣದಲ್ಲಿ, ಜಾನಪದ ಕತೆಗಳಲ್ಲಿ ಕಾಣಬಹುದು ಆದರೆ Boredomನ್ನು. ಬೇಸರವನ್ನು ಅದರ ಎಲ್ಲ ವಿನ್ಯಾಸದಲ್ಲಿ ಲಯದಲ್ಲಿ ಕಥಾ ಪ್ರಪಂಚಕ್ಕೆ ತಂದಿರುವ ಲೇಖಕಿ ಇ ವ ರೊ ಬ್ಬ ರೇ ಎನಿಸುತ್ತದೆ. Boredom ಎನ್ನುವುದು ಇವರ ಕತೆಗಳ Motiff ಏನೋ ಎನ್ನುವಂತಹ ಅರ್ಥದಲ್ಲಿ ಮತ್ತೆ ಮತ್ತೆ ಇವರ ಕತೆಗಳಲ್ಲಿ ಎದುರಾಗುತ್ತಲೇ ಇರುತ್ತದೆ, ವಿವರಗಳಲ್ಲಿ ತೀರ್ಮಾನದಲ್ಲಿ. ಆ ಯ್ಕೆ ಯ ಲ್ಲಿ ತುಂಬಾ ಸ್ಥಿತಿವಂತ ಕುಟುಂಬಗಳಲ್ಲಿ. ಮನೆಯೊಡತಿಯಾದವಳಿಗೂ ದಿನನಿತ್ಯದ ಅಡಿಗೆ ಕೆಲಸ ಮಾಡುವ ಹೆಂಗಸಿಗೂ ಈ ಬೇಸರವನ್ನು ಅನುಭವಿಸುವುದರಲ್ಲಿ ಯಾವ ರೀತಿಯ ವ್ಯತ್ಯಾಸವೂ ಇರುವುದಿಲ್ಲ. ಬಿಸಿಲ್ಗುದುರೆಯ ಶ್ರೀಮಂತೆ ಸುಶೀಲೆ ಮನೆಗೆಲಸದ ಹೆಂಗಸು ಲಕ್ಷ್ಮಿ-ಇವರಿಬ್ಬರೂ ಅನುಭವಿಸುವ ಸಾಮಾನ್ಯ ಸಂಗತಿಯೆಂದರೆ Boredom ಏ, ಹೆಂಗಸರು ಅನುಭವಿಸುವ leisure ಕೂಡ ಯಾಂತ್ರಿಕವಾದದ್ದೇ ಎ ನ್ನು ವು ದ ನ್ನು ಕೂಡ ಈ ಕತೆಗಳು ಸೂಚಿಸುತ್ತವೆ.

ದೈನಿಕತೆಯ ಆಳದ ಅರಿವಿದ್ದವರಿಗೇ ಆದರ್ಶದ ಬಯಕೆಯು ಜಾಸ್ತಿಯೇನೋ ಎನ್ನುವ ಮಾತಿಗೆ ಪುರಾವೆಯಂತಿದೆ ಇವರ ಇನ್ನೊಂದು ಆಲೋಚನಾ ಸರಣಿ. ಇವರ ಪ್ರಕಾರ ಆದರ್ಶದ ಸ್ಥಿತಿಗೆ, ಬಿಡುಗಡೆಯ ಕಾವಿಗೆ, ದಾಟುವ ಮೊದಲ ಹೆಜ್ಜೆಗೆ ಹೆಂಗಸೇ ಸಹಜವಾಗಿ ಹತ್ತಿರವಾಗುತ್ತಾಳೆ. ಎಂಬುದನ್ನು ಇವರು ಮತ್ತೆ ಮತ್ತೆ ಸೂಚಿಸುತ್ತಾರೆ ರಾಜಕೀಯ ನಾಯಕಿಯ ಭ್ರಷ್ಟತೆಯನ್ನು ಮೊದಲು ವಿರೋಧಿಸುವ ಅವನ ಪತ್ನಿ. ತನ್ನ ಧರ್ಮದಿಂದಾಚೆಗೆ ಮದುವೆಯಾಗುವ ದಮಯಂತಿ, ಸಂಗೀತ ಪ್ರೇಮಕ್ಕಾಗಿ ಸಂಸಾರವನ್ನು ತೊರೆದವಳು. ಇವರೆಲ್ಲರ ಆಯ್ಕೆಯನ್ನು ಸೂಚಿಸುವಲ್ಲಿ ಘೋಷಿಸುವಲ್ಲಿ ಲೇಖಕಿಗೆ ತನ್ಮಯತೆ ಇರುವಂತೆ ಕಾಣುತ್ತದೆ.

೩

ನನ್ನ ಇದುವರೆವಿಗಿನ ವಿಶ್ಲೇಷಣೆಯಲ್ಲಿ ಇವರ ಕೆಲವು ಕತೆಗಳನ್ನು ಮಾತ್ರ ಸೂಚಿಸಿದ್ದೇನೆ. ಇದಕ್ಕೆ ಕಾರಣವನ್ನು ಕೂಡ ಈಗಾಗಲೇ ಸೂಚಿಸಲಾಗಿದೆ. ಜೊತೆಗೆ ಇನ್ನೊಂದೆರಡು ಮಾತುಗಳನ್ನು ಕೂಡ ಹೇಳಬಹುದು ಇವರು ಎಷ್ಟೇ ಕತೆಗಳನ್ನು ಬರೆದಿದ್ದರೂ ಎಷ್ಟೊಂದು ವ್ಯಾಪಕವಾಗಿದೆಯಲ್ಲ ಎಂದೆನಿಸಿದರೂ ಅವರ ಕಥಾ ಪ್ರಪಂಚ ಹಿಗ್ಗುವುದಿಲ್ಲ. ಹಿಗ್ಗುವುದೇ ಅಷ್ಟೊಂದು ಮುಖ್ಯವಲ್ಲವೆಂದರೂ ಮೊದಲನೆಯ ಕತೆಯಿಂದ ಕೊನೆಯ ಕತೆವರೆಗೆ ಹೇಳುವ ಕ್ರಮದಲ್ಲಿ; ಅಭಿವ್ಯಕ್ತಿಯ ಕ್ರಮದಲ್ಲಿ ಯಾವ ರೀತಿಯ ಬದಲಾವಣೆಯು/ಬೆಳವಣಿಗೆಯು ಇಲ್ಲದ್ದರಿಂದ ಸಾಹಿತ್ಯ ಕೃತಿಗಳಾಗಿ ಕೊಡುವಂತಹ ಹೊಸ ಅನುಭವವನ್ನು ಕೊಡುವುದಿಲ್ಲ. ಆದ್ದರಿಂದಲೇ ಕೆಲವು ಕತೆಗಳನ್ನು ಉದಾಹರಣೆಗಾಗಿ ತೆಗೆದುಕೊಂಡು-ಆಶಯ-ನಿರೂಪಣಾ ತಂತ್ರಗಳ ಬಗ್ಗೆ ಮಾತನಾಡುವುದು ಹೆಚ್ಚು ಸೂಕ್ತವಾದ ಮಾರ್ಗ ಎನಿಸುತ್ತದೆ.

ಲೇಖಕಿಯರ ಸಾಹಿತ್ಯವನ್ನು ವಿಶ್ಲೇಷಿಸುವಾಗಲೆಲ್ಲ ಅವರ ಕಥಾ ಪ್ರಪಂಚ ಪ್ರತ್ಯೇಕವೆನ್ನುವಂತೆಯೇ ನಾವು ಮಾತನಾಡುತ್ತಾ ಬಂದಿದ್ದೇವೆ, ಆದರೆ ಲೇಖಕ-ಲೇಖಕಿ ಒಂದೇ ಕಾಲದಲ್ಲಿ ಬರೆದಾಗ ಉಂಟಾಗುವ ಅಂತರ್ ಸಂಬಂಧಗಳ ಬಗ್ಗೆ ನಾವು ಮಾತನಾಡುವುದೇ ಇಲ್ಲ,

ಹೆಣ್ಣನ್ನು ತಾಯಿ, ಪ್ರಕೃತಿ, ಜಗನ್ಮಾತೆ. ಅಜ್ಜಿ ಎಂದೆಲ್ಲ ನಮ್ಮ ಸಂಸ್ಕೃತಿಯ ಮುಖ್ಯ ಲೇಖಕರೆಲ್ಲ ಬರೆಯುತ್ತಿದ್ದಾಗ ಹೆಣ್ಣೆಂದರೆ ಆದಲ್ಲ, ಅಷ್ಟೇ ಅಲ್ಲ ಎಂದು ಅವರ ಸಮ ಕಾಲೀನರಾದ ಸಾವಿತ್ರಮ್ಮನವರು ಬರೆದಿದ್ದಾರೆ. ಈ ರೀತಿಯ ಅಂ ತ ರ್ ಸಂಬಂಧಕ್ಕೆ ಸ್ವರೂಪಪಟ್ಟಹಾಗೆ ಇನ್ನೊಂದೆರಡು ಅಂಶಗಳನ್ನು ಪರಿಶೀಲಿಸಬೇಕೆನಿಸುತ್ತದೆ ಇಷ್ಟವಿರಲಿ, ಇಲ್ಲದಿರಲಿ ಹೆಂಗಸು ದೈನಿಕದಲ್ಲಿ ಮುಳುಗಿ ಹೋಗಿರುತ್ತಾಳೆ. ದೈನಿಕ ಪ್ರಪಂಚ ಅವಳಿಗೆ ಹತ್ತಿರ ವಾದದ್ದು. ಅದು, ಅವಳ ಸಂವೇದನೆಯ, ಇಲ್ಲ ಉಸಿ ರಾಟದ ಭಾಗ. ಅಂದರೆ, ಅದು ಅವರಿಗೆ ಅತ್ಯಂತ ಸಹಜ ವಾದದ್ದು ಆದರೆ ಲೇಖಕರಿಗೆ ಅದು "ವಿಶೇಷ"ವಾದ್ದು. ದೈನಿಕ ಬದುಕಿನ ವಿವರಗಳು ಹೆಚ್ಚಿದಷ್ಟು ಲೇಖಕನೊಬ್ಬನ ಘನತೆ ಹೆಚ್ಚಿತೆಂಬಂತೆ ನಾವು ಮಾತನಾಡುತ್ತೇವೆ. ಸರಿ. ಆದರೆ ಲೇಖಕಿಯರು ಅ ಷ್ಟೊಂ ದು ಹತ್ತಿರವಿದ್ದು. ಅಷ್ಟೊಂದು ಗಾಢವಾಗಿ ಅನುಭವಿಸಿದ ದೈನಿಕದ ಬಗ್ಗೆ ಅವರು ನೀಡುವ ವಿವರಣೆಯಲ್ಲಿ ಧ್ವನಿಶಕ್ತಿಯೇ ಇರುವು ದಿಲ್ಲ. ಈ ಮಾತು ಸಾವಿತ್ರಮ್ಮನವರ ಬಗ್ಗೆ ಮಾತ್ರ ಅಲ್ಲ ಕನ್ನಡದ ಬಹುಪಾಲು ಲೇಖಕಿಯರೆಲ್ಲರ ಬಗ್ಗೆಯೂ ನಿಜ. ವಿಶೇಷವಾಗಿ ಕಥಾ ಸಾಹಿತ್ಯದಲ್ಲಿ ತೊಡಗಿರುವವರಿಗೆ ಈ ಮಾತು ಅನ್ವಯಿಸುತ್ತದೆ.

ಬರವಣಿಗೆಯಲ್ಲಿ ಧ್ವನಿಶಕ್ತಿ ಬಂದಿಲ್ಲದೆ ಹೋಗಿರ ಬಹುದು, ಆದರೆ ಲೇಖಕಿಯರು ದೈನಿಕ ಪ್ರಪಂಚದಲ್ಲಿ ಎಷ್ಟೊಂದು ಮುಳುಗಿ ಹೋಗಿರುತ್ತಾರೆಂದರೆ ಲೇಖಕ ರನ್ನು ಕಾಡುವ ಮರದ ಬಯಕೆ, ಆಧ್ಯಾತ್ಮದ ಗೀಳು ಇವೆಲ್ಲಾ ಅವರನ್ನು ಭಾದಿಸುವುದೇ ಇಲ್ಲ. ಅವರಿರುವ ಸ್ಥಿತಿಯಲ್ಲೇ. ಅವರು ಬರೆಯುವ ಸ್ಥಿತಿಯಲ್ಲೇ ಈ ರೀತಿಯ ಇತ್ಯಾತ್ಮಕ ಧೋಷಣೆಯೆಂಬುದೊಂದು ಸಂಭ ವಿಸಿಬಿಡುತ್ತದೆ. ಎಂದೆನಿಸುತ್ತದೆ. ಸಾಂಪ್ರದಾಯಿಕ ಹಿನ್ನೆಲೆ ಯಿಂದ ಬಂದಂತಹ ಸಾವಿತ್ರಮ್ಮನವರ ಕತೆಗಳ ಬಗ್ಗೆ ಈ ಮಾತು ನಿಜವೆನ್ನಿಸುವ ಹಾಗೆ ಹೊಸ ರೀತಿಯ ವಿದ್ಯಾ ಭ್ಯಾಸ. ಧೋರಣೆಗಳನ್ನು ಪಡೆದ ಲೇ ಖ ಕಿ ಯ ರ ಬಗ್ಗೆಯೂ ಕೂಡ ನಿಜವೆನಿಸುತ್ತದೆ.

ಲೇಖಕ ಲೇಖಕಿಯರ ಬರವಣಿಗೆ-ಗ್ರಹಿಕೆಯ ಕ್ರಮ ಗಳ ಅಂತರ್ ಸಂಬಂಧದ ಬಗ್ಗೆ ಹೇಳಿದ ಮೇಲೆ ಸಾವಿತ್ರ ಮ್ಮನವರ ಒಂದು ಮುಖ್ಯ ಕತೆಯಾದ ಪಾತು ಕತೆಯನ್ನು ತೆಗೆದುಕೊಂಡು ಆ ಕತೆಯ ವಸ್ತು ಮತ್ತು ಆ ವಸ್ತುವನ್ನು ನಮ್ಮ ಸಮಾಜ ಗ್ರಹಿಸುವ ರೀತಿಯ ಬಗ್ಗೆ ಕೆಲವು ಮಾತು ಗಳನ್ನು ಹೇಳಿ ಈ ಲೇಖನವನ್ನು ಮುಗಿಸಲಿಚ್ಛಿಸುತ್ತೇನೆ ಪಾತು ಕತೆ 1965ರಲ್ಲಿ ಪ್ರಕಟವಾದದ್ದು. ಇದು ಇಂದಿರಾ ಅವರ ಫಣಿಯಮ್ಮ ಕಾದಂಬರಿಯನ್ನು ಹೋಲುತ್ತದೆ. ಫಣಿಯಮ್ಮದ ಕಥಾ ವಸ್ತುವಿನ ಕಾಲ 1850ರ ಸುಮರು ಎಂದಿಟ್ಟುಕೊಂಡರೆ ಅದು ಪ್ರಕಟವಾದದ್ದು 1980ರಲ್ಲಿ. ಫಣಿಯಮ್ಮ ನಮ್ಮ ಅನುಕಂಪ-ಮೆಚ್ಚುಗೆ-ಪ್ರಶಸ್ತಿ ಎಲ್ಲ ವನ್ನು ಪಡೆಯಿತು, ಪಾತು ಕತೆಯ ನಾಯಕಿ ಕೂಡ ವಿಧ ವೆಯೇ. ಅವಳ ಜೀವನದ ಘಟನೆಗಳು, 1930–35ರ ಅವಧಿಗೆ ಸಂಬಂಧಿಸಿದಂತಿದೆ. ಅ ವ ಳು ಬೆಂಗಳೂರಿಗೆ ಬರ್‍ತಾಳೆ. ವಿಧವೆಯಾದ ಮೇಲೆ ಅಕ್ಷರ ಕಲೀತಾಳೆ. ಗಂಡನನ್ನು ಕಳೆದುಕೊಂಡಿರುವುದರಿಂದ ತಮ್ಮನ ಮೂಲಕ ಬದುಕನ್ನು ಅನುಭವಿಸಲು ಯತ್ನಿಸುತ್ತಾಳೆ, ಕೆಲ ವರ್ಷ ಗಳ ನಂತರ ತನಗೂ ಒಂದು ವ್ಯಕ್ತಿತ್ವ ಬೇಕೆನಿಸುತ್ತದೆ. ಎರಡನೆಯ ಸಲ ಮದುವೆಯಾಗಬೇಕೆಂದು ಆಸೆ ಪಟ್ಟಾಗ ಹಾಗೆ ಆಸೆ ಮುಟ್ಟಿಸಿದ ಹುಡುಗ ಕೂಡ ಸಾಯ್ತಾನೆ. ಆಮೇಲೂ ಕೂಡ ಇನ್ನೊಂದು ಸಂಬಂಧಾನ ಒಪ್ಪಿಕೊಳ್ಳು ತ್ತಾಳೆ. ಇದು ಅವಳ ಕತೆ. ಬರವಣಿಗೆಯ ಗುಣ. ಶಕ್ತಿ ತೆಗೆದುಕೊಂಡರೆ ಪಾತು ಕತೆ-ಫಣಿಯಮ್ಮದ ನಡುವೆ ಅಂತಹ ಗಹನವಾದ ವ್ಯತ್ಯಾಸವೇನಿಲ್ಲ.

ಪಾತು ಕತೆ ಹೆಂಗಸಿನ ಸಾಮಾಜಿಕ ಸ್ಥಿತಿಯಲ್ಲಾದ ಬದಲಾವಣೆಯನ್ನು ಸೂಚಿಸುವಂತೆ ಅವಳೇ ಅವಳನ್ನು ನೋಡಿದ, ನೋಡಿಕೊಳ್ಳುವ ದೃಷ್ಟಿಕೋನದಲ್ಲಾದ ಬದ ಲಾವಣೆಯನ್ನೇನೂ ಸೂಚಿಸುವುದಿಲ್ಲ ಆದರೂ ನಾವು ಫಣಿಯಮ್ಮನ ಬಗ್ಗೆ ತೋರಿದ ಉತ್ಸಾಹ, ಆದರವನ್ನು ಪಾತು ಕತೆಯ ಬಗ್ಗೆ ಏಕೆ ತೋರಲಿಲ್ಲ ಎಂಬುದು ಮಾತ್ರ ಕುತೂಹಲದ ವಿಷಯ.

"ಪಾತು ಕತೆ"ಯ ವಸ್ತು ಅದರ ಲೇಖಕಿ ನಮ್ಮ ಕುತೂಹಲವನ್ನು ಕೆರಳಿಸಿದ್ದರೆ, ಸಾವಿತ್ರಮ್ಮನವರ ಕತೆಗಳ ವಿಶ್ಲೇಷಣೆಗೆ ಈಗ ಪ್ರಾರಂಭವಾಗುತ್ತಿರಲಿಲ್ಲ. ಎನ್ನುವುದ ಕ್ಕಿಂತಲೂ ಮುಖ್ಯವಾದ ಸಂಗತಿ ಇನ್ನೊಂದಿದೆ. ಹೆಣ್ಣು ತನ್ನನ್ನು ತಾನೇ ನೋಡಿಕೊಳ್ಳುವ ದೃಷ್ಟಿಕೋನದಲ್ಲಿ ಇನ್ನೊಂದೆರಡು ಹೆಜ್ಜೆ ಮುಂದೆ ಹೋಗಿಬಿಡಬಹುದಿತ್ತು ಈ ವೇಳೆಗೆ.

ಲೋಕಸಭೆಯಲ್ಲಿ ಸದಸ್ಯೆಯರು

1991ರ ಸಾರ್ವತ್ರಿಕ ಚುನಾವಣೆಯಲ್ಲಿ ಮೀಸಲಾತಿ ಒಂದು ಬಹು ಮುಖ್ಯ ಅಂಶವಾಗಿತ್ತು. ವಿ. ಪಿ. ಸಿಂಗ್ ನೇತೃತ್ವದ ಜನತಾದಳ ಸರ್ಕಾರ ಹಿಂದುಳಿದ ವರ್ಗಗಳಿಗೆ ಶೇಕಡ 27ರ ಮೀಸಲಾತಿಯನ್ನು ನೀಡಬೇಕೆಂಬ ಮಂಡಲ ವರದಿಯನ್ನು ಒಪ್ಪಿಕೊಂಡಿದ್ದು, ಅದರ ಪರಿಣಾಮವನ್ನು ಯಾವ ರಾಜಕೀಯ ಪಕ್ಷವೂ ಗೌಣವಾಗಿ ಪರಿಗಣಿಸುವುದು ಅಸಾಧ್ಯವಾಗಿತ್ತು.

ಎಲ್ಲ ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಮಹಿಳೆ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಘೋಷಿಸಿದ್ದರೂ ಮಹಿಳಾ ಪ್ರತಿನಿಧಿಗಳನ್ನು ಆಯ್ಕೆ ಮಾಡುವಲ್ಲಿ ಹಾಗೂ ಮೀಸಲಾತಿ ನೀಡುವಲ್ಲಿ ಮಾತ್ರ ಹಿಂದೆ ಬಿದ್ದವು. ಮಂಡಲದ ಪ್ರಭಾವ ಈ ಅಂಶವನ್ನು ಸಂಪೂರ್ಣವಾಗಿ ಕೊಚ್ಚಿ ಹಾಕಿತು. ಅಂತೂ ಮಹಿಳೆ ಹಿಂದುಳಿದವರಲ್ಲೆಲ್ಲಾ ಅತ್ಯಂತ ಹಿಂದುಳಿದವಳಾಗಿಯೇ ಉಳಿದು ಬಿಟ್ಟಳು.

ಪಾರ್ಲಿಮೆಂಟಿನಲ್ಲಿ ಮಹಿಳೆಯರ ಅಂಕಿ ಸಂಖ್ಯೆಯನ್ನು ಗಮನಿಸಿದರೆ ನಿರಾಶೆಯ ಚಿತ್ರ ಮೂಡುತ್ತದೆ. ವಿಜಯಲಕ್ಷ್ಮಿ ಪಂಡಿತ್, ಇಂದಿರಾ ಗಾಂಧಿಯಂತಹ ಉತ್ತಮ ಪಾರ್ಲಿಮೆಂಟ್ ಸದಸ್ಯೆಯರಿದ್ದರೂ 1952ರಲ್ಲಿ ಒಟ್ಟು ಪಾರ್ಲಿಮೆಂಟ್ ಸದಸ್ಯೆಯರ ಸಂಖ್ಯೆ ಕೇವಲ 14. ಅದರ ನಂತರ 1956ರಲ್ಲಿ 27, 1962ರಲ್ಲಿ 35, 1967ರಲ್ಲಿ 31, 1971ರಲ್ಲಿ 21, 1977ರಲ್ಲಿ 19, 1980ರಲ್ಲಿ 28, 1984ರಲ್ಲಿ 42. 1989ರಲ್ಲಿ 27ರತ್ತ ಇಳಿಮುಖ ಕಂಡು ಬರುತ್ತದೆ.

ಇನ್ನು ಮಹಿಳಾ ಅಭ್ಯರ್ಥಿಗಳ ವಿಷಯಕ್ಕೆ ಬಂದರೆ, ಕಾಂಗ್ರೆ ಪಕ್ಷವು 1989ರಲ್ಲಿ 53 ಅಭ್ಯರ್ಥಿಗಳನ್ನು ಸ್ಪರ್ಧೆಯ ಕಣದಲ್ಲಿ ನಿಲ್ಲಿಸಿತ್ತು, ಆದರೆ ಇತ್ತೀಚೆಗೆ ಕಾಂಗ್ರೆ ಘೋಷಿಸಿದ ಶೇಕಡ 30ರ ಮೀಸಲಾತಿಯು ಕೂಡ ಪಂಚಾಯತ್ ರಾಜ್ ಚುನಾವಣೆಗೆ ಸೀಮಿತವಾಗಿತ್ತೇ ವಿನಹ ಅಭ್ಯರ್ಥಿಗಳನ್ನು ನಿಲ್ಲಿಸುವಲ್ಲಿಗೆ ಈ ಮೀಸಲಾತಿ ಅನ್ವಯವಾಗಲಿಲ್ಲ.

1989ರಲ್ಲಿ ಜನತಾ ದಳ ಸರ್ಕಾರ ಕೂಡ ಪಕ್ಷದ ಟಿಕೇಟು ಹಂಚಿಕೆಗೆ ಶೇಕಡ 30ರ ಮೀಸಲಾತಿಯನ್ನು ಘೋಷಿಸಿತಾದರೂ ಕೇವಲ ಐದು ಮಹಿಳೆಯರಿಗೆ ಮಾತ್ರ ಸ್ಥಾನ ಬಿಟ್ಟುಕೊಟ್ಟಿತು. ಈ ನಿಲುವಿಗೆ ಕಾರಣ ಕೇಳಿದಾಗ ಪಕ್ಷದ ವರಿಷ್ಠರು ನೀಡಿದ ಉತ್ತರ "ಸಾಕಷ್ಟು ಮಹಿಳಾ ಅಭ್ಯರ್ಥಿಗಳು ಚುನಾವಣೆಗೆ ನಿಲ್ಲಲು ಮುಂದೆ ಬರುತ್ತಿಲ್ಲ" ದೇಶದ ಉದ್ದಗಲಕ್ಕೂ ದಲಿತರನ್ನು, ಅಲ್ಪ ಸಂಖ್ಯಾತರನ್ನು ಸಂಘಟಿಸುವಲ್ಲಿ ಸಮರ್ಥರಾದ ಪಕ್ಷಕ್ಕೆ ಹಾಗೆಯೇ ಮಹಿಳೆಯರನ್ನು ಸಂಘಟಿಸುವುದು ಕಷ್ಟವಾಗಬಾರದಲ್ಲವೇ?

1989ರ ಚುನಾವಣೆಯಲ್ಲಿ ಒಟ್ಟು ಅಭ್ಯರ್ಥಿಗಳ ಸಂಖ್ಯೆ ಮತ್ತು ಅದರಲ್ಲಿ ಮಹಿಳೆಯರ ಸಂಖ್ಯೆಯನ್ನು ಗಮನಿಸಿ: ಕಾಂಗ್ರೆಸ್: 510-56. ಜನತಾ ದಳ:244-5 ಭಾರತೀಯ ಜನತಾ ಪಕ್ಷ: 226-10, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ: 69-3, ಕಮ್ಯುನಿಸ್ಟ್ ಪಕ್ಷ: 42-2 ಕಾಂಗ್ರೆ ಪಕ್ಷ ಅತಿ ಹೆಚ್ಚಿನ ಮಹಿಳಾ ಅಭ್ಯರ್ಥಿಗಳನ್ನು ಕೀರ್ತಿಗೆ ಪಾತ್ರವಾಗಿದೆ, ಆದರೆ ಎಡ ಪಂಥೀಯ ಪಕ್ಷಗಳೂ ಕೂಡ ಈ ವಿಷಯದಲ್ಲಿ ಹಿಂದೆ ಬಿದ್ದಿದೆ.

ರಾಜಸ್ಥಾನ ರಾಜ್ಯವು ಮೂಢ ನಂಬಿಕೆ, ಅಜ್ಞಾನ ಧಾರ್ಮಿಕ ಮೌಢ್ಯಗಳ ತವರೂರಾಗಿದ್ದರೂ ಲೋಕಸಭೆಗೆ ಐದು ಸದಸ್ಯೆಯರನ್ನು ಕೊಟ್ಟಿದೆ, ಆದರೆ ಇವರಲ್ಲಿ ಬಹು ಮಂದಿ ಸಾಮಾನ್ಯ ಜನ ಸಮೂಹದಿಂದ ಬಂದ

ವರಲ್ಲವೆಂಬುದನ್ನು ಗಮನಿಸಬೇಕು. ಹಿಂದಿನ ಮಹಾರಾಣಿ (ಗಾಯತ್ರಿ ದೇವಿ), ಠಾಕೂರಾಣಿ (ಮೋಹನ್‌ಲಾಲ್ ಸುಹಾಡಿಯಾರ ವಿಧವೆ). ಹೀಗೆ ರಾಜ ಮನೆತನಗಳ, ಗಣ್ಯ ನಾಯಕ ಸಂಬಂಧಿಗಳೇ ಆಗಿದ್ದಾರೆ.

ಮುಖ್ಯವಾಗಿ ಎಲ್ಲಾ ಮಹಿಳಾ ಸದಸ್ಯೆಯರು ಮಹಿಳಾ ಸಮಸ್ಯೆಗಳನ್ನು, ವಿಷಯವನ್ನು ಲೋಕಸಭೆಯಲ್ಲಿ ಪ್ರಸ್ತಾಪಿಸಿದ್ದಾರೆಂದು ತಿಳಿಯಬೇಕಿಲ್ಲ, ನಮ್ಮ ದೇಶದ ಮಹಿಳಾ ಖಾತೆಯನ್ನು ವಹಿಸಿಕೊಂಡ ಮೊದಲ ಮಹಿಳಾ ಮಂತ್ರಿ ಮಾರ್ಗರೇಟ್ ಆಳ್ವ. 1986ರಲ್ಲಿ ಮುಸ್ಲಿಂ ಮಹಿಳೆಯರ ಕಾಯಿದೆಯನ್ನು ಪ್ರತಿಭಟಿಸಲಿಲ್ಲ. ವಿಜಯ ರಾಜೇ ಸಿಂಧ್ಯ ಬಹಿರಂಗವಾಗಿ "ಸತಿ" ಪದ್ಧತಿಯನ್ನು ಬೆಂಬಲಿಸಿದ್ದನ್ನು ನಾವು ಕಾಣುತ್ತೇವೆ.

ಆದರೆ ಕೆಲವು ಮಹಿಳಾ ಸದಸ್ಯೆಯಾರಾದರೂ ಮಹಿಳಾ ಸಮಸ್ಯೆಯನ್ನು ಕೈಗೆತ್ತಿಕೊಂಡು ತಮ್ಮ ಪಕ್ಷಗಳ ಚೌಕಟ್ಟಿನಲ್ಲಿಯೂ ಹೋರಾಡಿದ್ದನ್ನು ಗಮನಿಸಬಹುದು. ಪ್ರಮೀಳಾ ದಂಡವತೆ, ರಾಜಸ್ಥಾನದ ಜನತಾ ದಳದ ನೇತಾರ "ಸತಿ ಪದ್ಧತಿ"ಯನ್ನು ಬೆಂಬಲಿಸಿದ್ದನ್ನು ಕಟುವಾಗಿ ಪ್ರತಿಭಟಿಸಿದ್ದನ್ನು ನೆನಪಿಸಿಕೊಳ್ಳಬಹುದು, ಈ ಪ್ರತಿಭಟನೆಗೆ ಮಣಿಯದ ಕಲ್ಯಾಣ ಸಿಂಗ್ ಮುಂದೆ ಚಂದ್ರ ಶೇಖರ್ ಮಂತ್ರಿ ಮಂಡಲದಲ್ಲಿ ಮಂತ್ರಿಯಾದದ್ದೂ ಅಷ್ಟೇ ಸತ್ಯ.

ಎಡ ಪಕ್ಷಗಳ ಸದಸ್ಯೆಯರಾದ ಗೀತಾ ಮುಖರ್ಜಿ ಸುಶೀಲಾ ಗೋಪಾಲನ್ ಮುಂತಾದವರು ವರದಕ್ಷಿಣೆ ವಿರೋಧಿ ಕಾನೂನನ್ನು ಜಾರಿಗೆ ತರಲು ಅಸಮರ್ಥರಾರಾದಾಗ ಪ್ರತಿಭಟಿಸಿದ್ದಾರೆ. ವರದಕ್ಷಿಣೆ ಮತ್ತು ಅತ್ಯಾಚಾರದ ಕಾನೂನುಗಳಲ್ಲಿ ಬದಲಾವಣೆ, ತಿದ್ದುಪಡಿ ತರಲು ಸಾಕಷ್ಟು ಶ್ರಮಿಸಿದ್ದಾರೆ,

ಮತ್ತೊಂದು ಗಮನಾರ್ಹ ಅಂಶವೆಂದರೆ, 1989ರಲ್ಲಿ ಸ್ಪರ್ಧಿಸಿದ 1989 ಮಹಿಳಾ ಅಭ್ಯರ್ಥಿಗಳಲ್ಲಿ ಎಂಬತ್ತು ಮಂದಿ ಸ್ವತಂತ್ರ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದರು ಹಲವಾರು ರಾಜಕಾರಣಿಗಳು ಮಹಿಳೆಯರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಆಸಕ್ತಿ ಇಲ್ಲ ಎಂದು ಹೇಳುವ ಅಂಶವನ್ನು ಈ ಸತ್ಯ ಸುಳ್ಳಾಗಿಸುತ್ತದಲ್ಲವೇ?

(ವಾಯ್ಸ್ ಆಫ್ ದಿ ವರ್ಕಿಂಗ್ ವಿಮೆನ್ ಕೃಪೆ)

ಅನುಪಮ ನೆನಪು

ಹೂವಿನ ಹಾರಗಳ ಹೊದ್ದ ನಿರಾತಂಕ ನಿದ್ದೆಯಲ್ಲಿ ಪರಿಮಳಿಸುವ ಸಾವಿನೊಂದು ಸಾಂಕ್ರಾಮಿಕ ಕತೆಯಿದೆ ಸುಂದರ ಎಂಥ ಬಂಧುರ: ಎಷ್ಟೊಂದು ಸಂಕೀರ್ಣ ಸತ್ವ?

ಹೊಕ್ಕಲಿನ ಬಳ್ಳಿ ಹೊತ್ತಿಸಿ ಚೆಲ್ಲುವ ಬೆಳಕು ಅಪ್ಪ ಅಮ್ಮರ" ಕಥೆ"ಗೆ ನೆತ್ತರ ಕಾಣಿಕೆಯಲ್ಲಿ ಮಕ್ಕಳ ಕೊಡುಗೆ ಯಾವ ಸತ್ಯ ಸುಂದರ ಎಂಥ ಬಂಧುರ, ಎಷ್ಟೊಂದು ಸಂಪೂರ್ಣ ತತ್ವ? ಕ್ಯಾನ್ಸರಂಥ ಕಾಟಕ್ಕೆ ಬದುಕಿನ ಸರಿಸಮ ಪಾಟದ ಪಾಠಕ್ಕೆ ಸೊಪ್ಪು ಹಾಕದ ರೀತಿ ನೀತಿಯೂ ಕೂಡ ಸ್ವಂತ ಡಾಕ್ಟರಿಕೆ ಮದ್ದು ಸುಂದರ;ಎಂಥ ಬಂದುರ; ಎಷ್ಟೊಂದು ಸಂವಿಧಾನ ಮಹತ್ವ?.

"ಅಪ್ಪ"ನಾದದ್ದು ಹುಟ್ಟಿಂದ ಹೋರಾಟದ ಸೆಣಸಾಟದ ಬದುಕು "ಅಮ್ಮ"ನಾದದ್ದು ಕೂಡ ಸಾಹಸದ ಹೆಣ್ಣಿನಾತಂಕ ಸರಕು ಸುಂದರ;ಎಂಥ ಬಂಧುರ: ಎಷ್ಟೊಂದು ಸಂಪುಟದ ಸುತ್ತು?

ರೋಗವೆಂದಿಗೂ ಬದುಕನ್ನ ಪಮೌಲ್ಯಗೊಳಿಸಲಾರದ ಶತ್ರು! ಮುಗುಳು ನಗೆಯಲ್ಲಿ, ತಾಯಿತನದ(ಲ್ಲಿ) ಅನುಪಮ ನೆನಪು ಸ್ವತ್ತು!,

ಕ. ವೆಂ. ರಾಜಗೋಪಾಲ್

26–5–91 ಬೆಂಗಳೂರು

ಕತೆ

ತಾಯಿ ಮಾತಾಯಿ

ಶ್ಯಾಮಲಾ ದೇವಿ

"ಅಮ್ಮಾ. ಇದೆಯೇನು ಡಾಕ್ಟರ್ ಚೌಧರಿಯವರ ಮನೆಯು?" ಹೆಣ್ಣು ಮಗಳ ಕೂಗನ್ನು ಕೇಳಿದೊಡನೆ, ಅಡಿಗೆಯ ಮನೆಯಲ್ಲಿ ಊಟದ ಸಿದ್ಧತೆಯಲ್ಲಿದ್ದ ಇಂದಿರಾಬಾಯಿಯವರು ಎಲೆ-ದೊನ್ನೆ ಸಹಿತವಾಗಿಯೇ ಅಂಗಳಕ್ಕೆ ಓಡಿ ಬಂದರು.

ಬಾಗಿಲಲ್ಲೊಂದು ಟಾಂಗಾ ನಿಂತಿತ್ತು. "ಇದೇಯೇ ನಮ್ಮ ಚೌಧರಿ ಡಾಕ್ಟರನ ಮನೆಯು?"

"ಹೌದು, ತಾಯಿ, ಒಳಗೆ ಬರ್ರಿ" ನಾಲ್ವತ್ತೈದು ಐವತ್ತು ವರುಷದ ಇಳಿವಯಸ್ಸಿನ ಚೆಲುವೆಯೊಬ್ಬಳು ಹದಿನೇಳು-ಹದಿನೆಂಟರ ಸುಕುಮಾರಿಯೊಡನೆ ಇಳಿದು ಬಂದಳು.

"ಕುಳಿತುಕೊಳ್ಳಿರಿ; ಅಗೋ ಅಲ್ಲಿ ಕುರ್ಚಿಗಳಿವೆ.".

ಪುಣೆಯಲ್ಲಿ ರಾಮನಾರಾಯಣ ಚಾಳಿನ ಕಡೆಗೆ ಹೋಗುವ ದಾರಿಯಲ್ಲೊಂದು ಮಹಡಿಯ ಮನೆ. ಡಾ॥ ಚೌಧರಿಯವರು ಅದಕ್ಕೆ ಯಜಮಾನರು. ಮನೆಯಲ್ಲಿ ಅರಸ-ಅರಸಿಯರಿಬ್ಬರೇ. ಡಾಕ್ಟರ್ ಚೌಧರಿಯವರೂ ಆಗಿನ ಕಾಲದಲ್ಲಿ ಡಾಕ್ಟರೀ ಪರೀಕ್ಷೆಯನ್ನು ಕೊಟ್ಟವರೇ ಆದರೂ ಈಗಿನ ಡಾಕ್ಟರರಿಗೂ ಇವರಿಗೂ ಸ್ವಲ್ಪ ವ್ಯತ್ಯಾಸ. ಉಳಿದವರು ಹೇಗೆಯೇ ಇರಲಿ-ಡಾಕ್ಟರ್ ಚೌಧರಿಯವರು ಮಾತ್ರ ದೇವರು-ಧರ್ಮಗಳ ಮೇಲೆ ಒಳ್ಳೆಯ ಶ್ರದ್ಧೆಯುಳ್ಳವರು. ಪಾಪ-ಪುಣ್ಯಕ್ಕೆ ಹೆದರಿ ನಡೆಯುವವರು, ದಿನಾಲು ಸಾಯಂಕಾಲಕ್ಕೆ ಮಡಿಯು ಟ್ಟುಕೊಂಡು ದೇವರಿಗೆ ಮಂಗಳಾರತಿ ಮಾಡಲಿಕ್ಕೇ ಬೇಕು,

ಅಂದು ಸಹ ಮಡಿಯಿಂದ ಮಂಗಳಾರತಿ ಮಾಡುವುದರಲ್ಲಿ ಮಗ್ನರಾಗಿದ್ದರು. ಅದು ಮುಗಿದೊಡನೆಯೆ, ಇಂದಿರಾಬಾಯಿಯವರು ಹೊರಗೆ ಯಾರೋ ಇಬ್ಬರು ಹೆಣ್ಣು ಮಕ್ಕಳು ಬಂದು ಕುಳಿತಿರುವದಾಗಿ ತಿಳಿಸಿದರು.

ಇಷ್ಟು ಕತ್ತಲೆಯಾದ ಬಳಿಕ ಅದಾರು ಬಂದಿರಬಹುದೆಂದು ಅನುಮಾನಿಸುತ್ತ ಹೊರಗೆ ಬಂದರು. ದವಾಖಾನೆಯಲ್ಲಿ ಅವರಿಬ್ಬರು ತಾಯಿ ಮಕ್ಕಳು ಇವರಿಗಾಗಿ ಕಾಯ್ದಿದ್ದರು. "ಎಲ್ಲಿಯವರು? ಬಂದ ಕೆಲಸ ಯಾವದು?" ಎಂದು ಕೇಳಿದರು,

ಆಗ ಆ ವೃದ್ಧೆಯು ಹೇಳಿದಳು, "ಡಾಕ್ಟರ ಸಾಹೇಬರೆ, ನಾವು ಘೋರಪಡಿಯವರು, ಘೋರಪಡಿಯ ಶ್ರೀಧರರಾಯರು ತಮಗೆ ಒಂದು ಪತ್ರವನ್ನು ಕೊಟ್ಟಿದ್ದಾರೆ."

ಪತ್ರವನ್ನೋದಿದರು; ಕಿಡಿಕಿಡಿಯಾದರು. "ಇಂತಹ ಹಜಾಮಗಿರಿ ಮಾಡಲಿಕ್ಕೇನೆ ಏನು ನಾನು ಡಾಕ್ಟರಾದದ್ದು? ನಡೆಯಿರಿ, ಹೊರಬೀಳಿರಿಲ್ಲಿಂದ".

"ಉಶ್, ನಡೆಯವ್ವಾ ಲೀಲಾ! ಟಾಂಗಾದವನಿಗೆ ನಿಲ್ಲಲಿಕ್ಕಾದರೂ ಹೇಳಬೇಕಿತ್ತಲ್ಲ!" ಎನ್ನುತ್ತ ಮುದುಕಿಯು ಯಾವನಾದರೊಬ್ಬ ಟಾಂಗಾದವನು ಆ ದಾರಿಯಿಂದ ಬರುತ್ತಿರಬಹುದೇ ಎಂಬುದನ್ನು ನೋಡಲೆಂದು ಹೊರಕ್ಕೆ ಹೋದಳು,

ಅದೇ ವೇಳೆಯನ್ನು ಲೀಲೆಯು ಸಾಧಿಸಿದಳು. ಚಟ್ಟನೆದ್ದು ಮುದುಕಿಯನ್ನು ದುರುಗಟ್ಟಿ ನೋಡುತ್ತ ನಿಂತ ಡಾಕ್ಟರರ ಕಾಲುಗಳನ್ನು ಹಿಡಿದವಳೇ "ಡಾಕ್ಟರ್ ಸಾಹೇ

ಬರೇ. ಹೇಗಾದರೂ ಮಾಡಿ ನನ್ನನ್ನು ಈ ಸಂಕಟದೊಳಗಿಂದ ಪಾರು ಮಾಡಿರಿ. ಈ ರಾಕ್ಷಸಿಯ ಕೈಯಿಂದ ಬಿಡಿಸಿರಿ ನೀವೇ ನನ್ನ ಹಡೆದ ತಾಯಿ-ನೀವೇ ನನ್ನ ತಂದೆ-ಡಾಕ್ಟರ ದಾದಾ...." ಎಂದೆನ್ನುತ್ತ ಕಾಲಮೇಲೆ ಬಿದ್ದು ಅಳಹತ್ತಿದಳು,

"ದಾದಾ!...." ಡಾಕ್ಟರರ ಎದೆಯಲ್ಲಿ ಎಲ್ಲಿಂದಲೋ ಕರುಣೆಯ ಝುರಿ ಹುಟ್ಟಿದಂತಾಯಿತು.

"ಆಗಲಿ, ಮಗೂ. ನಾಳೆ ಮಧ್ಯಾಹ್ನಕ್ಕೆ ಬಾ. ಆ ಮುದುಕಿಯನ್ನು ತರಬೇಡ,"

"ಪರಮಾತ್ಮನು ನಿನಗೆ ಕಲ್ಯಾಣ ಮಾಡಲಿ."

"ಬಾರೇ ಲೀಲಾ, ಟಾಂಗಾ ಬಂದ ಹಾಗಿದೆ....ಉಪಾಯವಿಲ್ಲ ಬಾ....ಮತ್ತೆಲ್ಲಿಯಾದರೂ...." ಮು ದು ಕಿ ಕರೆಯುತೊಡಗಿದಳು.

ಇಂದಿರಾಬಾಯಿಯವರು ಬಾಗಿಲ ಮರೆಗೆ ನಿಂತು ಎಲ್ಲ ವನ್ನು ಕೇಳಿದರು. ಪತಿಯು ಇನ್ನೂ ಪುತ್ತಳಿಯಂತೆ ತಟಸ್ಥರಾಗಿ ನಿಂತುಬಿಟ್ಟಿದ್ದಾರೆ. ಕೈಯಲ್ಲಿ ಘೋರಪಡಿಯಿಂದ ಬಂದ ಅವಳ ತಮ್ಮ ಶ್ರೀಧರರಾಯನ ಪತ್ರ!

"ಹಾಳಾಗು ನೀಚಾ ..." ಪತ್ರವು ಕೈಯಿಂದ ಕಳಚಿತು. ಇಂ ದಿ ರಾ ಬಾ ಯಿ ಯು ಓ ಡಿ ಬಂ ದು ತೆಗೆದಳು: ಓದಿಕೊಂಡಳು.

"ಅಯ್ಯೋ ಏನಿದು? ಇದಕ್ಕಾಗಿಯೇ ಆ ಹುಡುಗಿಯನ್ನು ತಮ್ಮಲ್ಲಿಗೆ ಕಳುಹಿಸಿರುವನೆ? "ಉಳಿದ ಸಂಗತಿಯು ಹಿಂ ದಿ ನಿಂ ದ ತಿಳಿಯುವುದು" ಎಂದಿದ್ದಾನೆ. ಅಯ್ಯೋ ಭಾಗಾದಿ, ನೀನು ನನ್ನ ತಮ್ಮನಾಗಿ ಹುಟ್ಟಬಾರದಿತ್ತು. "ಉಳಿದ ಸಂಗತಿ" ಹಿಂದಿನಿಂದೇಕೆ. ಈಗಲೇ ತಿಳಿಯಿತಲ್ಲ. ಪಾಪಿಷ್ಟಾ?"

"ನೋಡು. ನಿನ್ನ ತಮ್ಮನ ಘೋರ ಕೃತ್ಯವನ್ನು!" ಡಾಕ್ಟರೆಂದರು.

ಇಬ್ಬರೂ ಹೇಗೆ ಹೇಗೊ ಊಟಮಾಡಿ ನಿದ್ರಿಸಿದರು. ಬೆಳಗಾಗುತ್ತಲೆ ಬೀಗನಿಗೆ "ಕೂಡಲೆ ಹೊರಟು ಬಾ" ಎಂದು ತಂತಿ ಬಿಟ್ಟರು, ಅವನು ಊರಲಿಲ್ಲವೆಂದು ಜವಾಬು ಬಂದಿತು, "ಆಯಿತು ಪರಾರಿಯಾಗಿರಲಿಕ್ಕೆ ಸಾಕು" ಎಂದು ಇನ್ನಿಷ್ಟು ರೇಗಿದರು. ಮಧ್ಯಾಹ್ನಕ್ಕೆ ಆ ಸಸ್ವರೂಪಿಯಾದ ಲೀಲೆಯು ಆಕಳಿಸುತ್ತ ಬಾಡಿದ ಮುಖದಿಂದ ಮೆಲ್ಲನಡಿಯಿಡುತ್ತ ಬಂದಳು,

"ತಂಗೀ ಅಟ್ಟದ ಮೇಲೆ ನಡೆ-ಪೇಶಂಟ್ಸ್ ನೋಡಿಕೊಂಡು ಈಗ ಬರುವೆನು."

ಇಂದಿರಾಬಾಯಿಯೊಡನೆಯೇ ಡಾಕ್ಟರರು ಅಟ್ಟವನ್ನು ಹತ್ತಿದರು. ಇಂ ದಿ ರಾ ಬಾ ಯಿ ಯ ನ್ನು ಕಂಡೊಡನೆ ಲೀಲೆಯು. "ಅಮ್ಮಾ. ಈ ಪೆಟ್ಟಿಗೆಯು ತಮ್ಮ ಬಳಿ ಇರಲಿ. ನಾನು ಬೇಡಿದಾಗ ಕೊಡಿರಿ" ಎಂದು ಹೇಳಿ, ಒಂದು ಭಾರವಾದ ಚಿಕ್ಕ ಪೆಟ್ಟಿಗೆಯನ್ನು ಅವಳ ಕೈಗೆ ಕೊಟ್ಟಳು.

ಆಗಬೇಕಾದುದೆಲ್ಲ ಆಗಿಹೋಯಿತು.... ಕ್ಲೋರೋಫಾರ್ಮಿನ ಮಬ್ಬು ಇಳಿದೊಡನೆ, "ಅಮ್ಮಾ. ನೀವೆ ನನ್ನ ತಾಯಿ? ಸಾಹೇಬರೇ. ನೀವೆ ನನ್ನ ತಂದೆ!" ಕಣ್ಣಲ್ಲಿ ನೀರು ತುಂಬಿ, ಗಂಟಲುಬ್ಬಿ ಬಂದು, ಮುಂದೆ ಮಾತು ಬಾರದಾದವು,

ಹತ್ತೆಂಟು ದಿನ ಶುಶ್ರೂಷೆ ಹೊಂದಿ, ಲೀಲೆ ಗುಣಮುಖಳಾದಳು. ಅಂದು ಅವಳಿಗೆ ಹೋಗಬೇಕಾಗಿತ್ತು.

"ಅಮ್ಮಾ. ಅಂದು ತಮ್ಮಲ್ಲಿಡಲು ಕೊಟ್ಟ ನನ್ನ ಆ ಪೆಟ್ಟಿಗೆಯನ್ನು ತನ್ನಿರಿ",

ತೆರೆದಳು: ತುಂಬ ಬಂಗಾರದ ಆಭರಣಗಳು. ಮುತ್ತಿನ ಕಂಠಿಯೊಂದು ಅದನ್ನು ತೆ ಗೆ ದು ಇಂದಿರಾಬಾಯಿಗೆ ಕೊಟ್ಟಳು-ಆಕೆ ತೋರಿಸಿದ ಕರುಣೆಗೆ ಪ್ರತಿದಾನವೆಂದು,

ಆಗ ಇಂದಿರಾಬಾಯಿಯು ಕೇಳಿದಳು "ತಂಗೀ ಹೀಗೇಕೆ ನಿನ್ನ ಅವಸ್ಥೆ?".

"ಅಯ್ಯೋ ಅಮ್ಮಾ, ಅದನ್ನೇನೆಂದು ಹೇಳಲಿ?.... ಮೊದಲು ನನ್ನ ತಾಯಿ ಕುಲೀನ ಮನೆತನದವಳು.... ಈಗಲಾದರೂ ಅಂಥ ಸಮಾಜಕ್ಕೆ ಅವಳು ಕುಲೀನಳೇ ಮುಂಬಯಿಯಂತಹ ದೊಡ್ಡ ಪಟ್ಟಣದಲ್ಲಿದ್ದವಳು. ಅಲ್ಲಿಯ ಸಾಹುಕಾರರ ಪತ್ನಿ, ನಾನು ಇನ್ನೂ ತಾಯಿ

ಗರ್ಭದಲ್ಲಿರುವಾಗಲೇ ತಂದೆಗೆರವಾವೆ, ಹಿರಿಗೆಯನ್ನು ಬಳಗದವರಲ್ಲಿ ತೀರಿಸಿಕೊಂಡು, ನನ್ನೊಡನೆ ಪುಣೆಯಲ್ಲಿ ಇದ್ದಳಂತೆ, ನನಗೆ ತಿಳಿಯ ತೊಡಗಿದಾಗ ನನ್ನನ್ನು ಪುಣೆಯ ಬೋರ್ಡಿಂಗಿನಲ್ಲಿ ಕಲಿಯಬಿಟ್ಟು ತಾನು ಘೋರ ಪಡಿಯಲ್ಲಿ ಮನೆ ಮಾಡಿದಳು. ನಾನು ಆಗಾಗ ಸೂಟಿಯಲ್ಲಿ ಬರಲಿಚ್ಛಿಸಿದರೆ, "ಬೇಡ, ಅಭ್ಯಾಸವು ಚೆನ್ನಾಗಿ ಆಗಲಾರದು. ಆಟ ನೋಟಕ್ಕೆ ಬಿದ್ದೆಯೆಂದರೆ ಇಲ್ಲಿಗೆ ಬಂದು!" ಎಂದು ಬರಗೊಡಲಿಲ್ಲ, ಮುಂದೆ ನಾನು ಹುಜೂರ್ ಪಾಗಾಡಲ್ಲಿರಹತ್ತಿದೆ. ನನ್ನ ಮ್ಯಾಟ್ರಿಕ್ ಪರೀಕ್ಷೆ ನಡೆದಿರುವಾಗಲೇ ಒಂದು ಪತ್ರ ಬಂದಿತು ನಿನಗಿನ್ನು ನನ್ನಿಂದ ಕಲಿಸಲಾಗುವುದಿಲ್ಲ. ಹೊರಟು ಬಾ" ಎಂದು, ಮೊದಲೇ ತಾಯಿಯ ದರ್ಶನಕ್ಕಾಗಿ ಹಾತೊರೆಯುತ್ತಿದ್ದ ನಾನೂ ಏನನ್ನೂ ವಿಚಾರಿಸದೆ ಊರಿಗೆ ಹೋದೆ....

"ನಾಲ್ಕಾರು ದಿನಗಳಲ್ಲಿಯೇ. ತಾಯಿಯೊಬ್ಬ ದೂರದ ಆಪ್ತನೊಡನೆ ಬಲುದಿನಗಳಿಂದಿರಬೇಕೆಂದು ಕಂಡುಬಂದಿತು ಇವನಾರೆಂದರೆ ತನ್ನ ಮೈದುನನೆಂತಲೂ ಇವನೇ ನಿನಗೆ ಇಲ್ಲಿಯವರೆಗೆ ಕಲೆಸಿದನೆಂತಲೂ ಹೇಳಿದಳು. ಆದರೆ ಮುಂದೆ ಕೆಲ ದಿನಗಳಲ್ಲಿಯೇ ಮೈದುನ ಗಿಯ್ದುನ ಎಲ್ಲವೂ ಸುಳ್ಳು. ಇಬ್ಬರೂ ಕಾಮುಖ ಸಂಬಂಧವುಳ್ಳವರು-ಎಂದು ಪೂರ್ಣವಾಗಿ ನಾನು ಮನಗಂಡೆನು."

"ನನ್ನ ಮೈಯೆಲ್ಲ ಜುಮ್ಮೆಂದಿತು, ಇಂತಹ ರಾಕ್ಷಸಿಯ ಕೈಕೆಳಗೆ ನಾನಿರುವುದು ಹೇಗೆ? ಎಂದು ಬೆದರಿದೆನು, ಒಂದು ದಿನ ಸಾಧಿಸಿ ಊರು ಬಿಟ್ಟು ಓಡಿಹೋದರಾಯಿತೆಂದೆ. ಡಾಕ್ಟರ್ ಸಾಹೇಬ. ಅವಳ ಸಹವಾಸದಲ್ಲಿದ್ದಿದೆಂದರೆ. ಉಡಿಯಲ್ಲಿ ಬೆಂಕಿ ಕಟ್ಟಿಕೊಂಡಂತೆಂದು ನನಗೆ ಅನ್ನಿಸಿತು, ನಾನು ಆ ಕ್ಷಣವೇ ಓಡಬೇಕಿತ್ತು. ಏನಾದರೂ ಕೆಲವು ಆಭರಣಗಳನ್ನು ಅಪಹರಿಸಿ ದುಡ್ಡಿನ ವ್ಯವಸ್ಥೆಯನ್ನು ಮುಖ್ಯವಾಗಿ ಮಾಡಿಕೊಳ್ಳದ ಹೊರತು ಹೊರಡಬಾರದೆಂದು ಹೊಂಚು ಹಾಕಿದೆ, ಆದರೆ... "

"ಆದರೆ ಅವಳ ಸಹವಾಸದ ಪಾಪದ ಫಲವು ನನಗೂ ತಾಕಿತು, ಆದೇ ದಿವಸ ರಾತ್ರಿ ಇಂದಿರಾಬಾಯಿಯ ತಮ್ಮಂದಿರ ಗೆಳೆಯನಾವನೊ ಒಬ್ಬ ಕಾಮಾಂಧನು-ಅವಳ ಸಹಾಯದಿಂದ ನನಗಾಗಿ ಬಂದಿದ್ದ, ನಮ್ಮ ತಾಯಿಗೆ ನಾನು ಬಹಳಷ್ಟು ಹೇಳಿದೆ.... ಮದುವೆಯಾಗೆಂದೆ ... ಆದರೆ, ದಾದಾ ದುಷ್ಟರು ಕೇಳಲಿಲ್ಲ. ಹಡೆದಮ್ಮನೇ ಕೇಳಲಿಲ್ಲ. ಅನ್ಯರದೇನು? ಮತ್ತೆ ಅವನಾದರೂ ಏನು? ಹೇಸಿಗೆಯೊಳಗಿನ ಹುಳುವಿದ್ದಂತೆ! ಕ್ಲೋರೋಫಾರ್ಮಿನ ಬಲದಿಂದ" ಲೀಲೆಯು ಬಿಕ್ಕಿ ಬಿಕ್ಕಿ ಅಳತೊಡಗಿದಳು,

"ಈಗ ಆ ಮಾತಿಗೆ ಐದು ಐದೂವರೆ ತಿಂಗಳಾಯ್ತು, ನಾನೊಬ್ಬ ಬಡ ಭಿಕಾರಿಯನ್ನಾದರೂ ಮದುವೆಯಾಗಿ ಸುಖದಿಂದ ಬಾಳುವೆ ಮಾಡುತ್ತಿರಬೇಕೆನ್ನುವಾಗ ತಾಯಿ ಈ ಪಾಡು ಮಾಡಿದ್ದನ್ನರಿತು, ಪಾಪಭೀರುವಾದ ಶ್ರೀಧರರಾಯರಿಗೆ ದಯೆ ಬಂದು, "ತಮ್ಮ ಬಳಿ ಹೋಗಿ ಸದ್ಯದ ಪಿಡುಗು ತಪ್ಪಿಸಿ ಬಾ" ಎಂದರು. ಇದೋ ಈ ಸಾರಿ ಬರುವಾಗ ಮಾತ್ರ ಆ ಮನೆಗೆ ಕೊನೆಯ ಶರಣು ಹೊಡೆದು. ಆಭರಣಗಳನ್ನು ಸಾಕಷ್ಟು ತೆಗೆದುಕೊಂಡು ಹೊರಬಿದ್ದಿರುವೆನು. "ಆರೋಗ್ಯ ಹೊಂದಲು ತಿಂಗಳವರೆಗೆ ದವಾಖಾನೆಯಲ್ಲಿರಬೇಕಾಗುತ್ತದೆ–ನೀನು ಬರಬೇಡ ಜನರು ಆಡಿಕೊಳ್ಳಬಹುದು" ಎಂದು ತಾಯಿಗೆ ಹೇಳಿದ್ದೇನೆ."

"ಇವನ್ನೆಲ್ಲ ಮಾರಿ ಬಂದ ಹಣವನ್ನು ಸೇವಿಂಗ್ಸ್‌ನ ಅಲ್ಲಿಟ್ಟು ಈಗಲೇ ಕಾಲೇಜು ಹಾಸ್ಟೆಲ್ ಸೇರುವೆನು, ತಕ್ಕವನು ಮುಂದು ಬಂದರೆ ವಿವಾಹ ಮಾಡಿಕೊಂಡು ನಿಶ್ಚಿಂತಳಾಗಿರುವೆನು; ಇಲ್ಲವಾದರೆ ಹೀಗೆಯೇ ಜನ್ಮ ನೀಗುವೆನು!"

ಅವರಿಬ್ಬರಿಗೆ ವಂದಿಸಿ. ಮನೆಯಿಂದ ಹೊರಬಿದ್ದವಳು ಗಾಳಿಯಂತೆ ಎಲ್ಲಿಯೋ ಮಾಯಾವಾದಳು,

ಇದು ಈಗಿನ ಐದಾರು ವರುಷಗಳ ಹಿಂದಿನ ಸಂಗತಿಯಾಗಿತ್ತು: ನಾನು ಮೊನ್ನೆ ಕ್ರಿಸ್ ಮಸ್ ರಜೆಯಲ್ಲಿ ಪ್ರಭಾತ ಸ್ಟುಡಿಯೋ ನೋಡಿಕೊಂಡು ಬರಬೇಕೆಂದು ಪುಣೆಗೆ ಹೋಗಿದ್ದೆನು. ಡಾಕ್ಟರ್ ಚೌದರಿಯವರಲ್ಲಿ ನನಗೆ ಮೊದಲಿನಿಂದಲೂ ಸಲುಗೆ ಬಹಳ, ಅವರಲ್ಲಿಗೆ ಹೋದಾಗ ಹಿಂದಿನ ಸಂಗತಿಯು ಜ್ಞಾಪಕಕ್ಕೆ ಬಂದಿತು,

"ಹುಡುಗಿಯ ಈಚೆಯ ವರ್ತಮಾನವೇನಾದರೂ ಮತ್ತೆ? ಮುಂದೆ ಅವಳ ಗತಿಯೇನು ಡಾಕ್ಟರ ಸಾಹೇಬರೇ?"

ಒಳಗಿನಿಂದ ಚಹದ ಕಪ್ಪಿನೊಡನೆ ಶ್ರೀಧರರಾಯರೂ ಫಲಹಾರದ ತಟ್ಟೆಯೊಡನೆ ಆ ಹುಡುಗಿಯೂ ಬೆನ್ನುಗುಂಟ ನೀರಿನ ತಂಬಿಗೆಯೊಡನೆ ಡಾಕ್ಟರರ ಪತ್ನಿ ಇಂದಿರಾಬಾಯಿಯೂ ಬಂದರು. ನಾನು ತುಂಬಾ ದಿಗಿಲುಗೊಂಡೆ,

ಅವಳ ರೂಪಕ್ಕೂ ಗುಣಕ್ಕೂ ಮನಸೋತು ಸುಧಾಕರರಾದ ಶ್ರೀಧರರಾಯರೇ ಅವಳನ್ನು ಮದುವೆಯಾಗಿ ಈಗೆರಡು ವರುಷವಾಗಿತ್ತು,

ದಿನ ತುಂಬಿದವಳಾಗಿ ಮತ್ತೆ ಡಾಕ್ಟರರಲ್ಲಿಗೆ ಬಂದಿದ್ದಳು–ಪುತ್ರವತಿಯಾಗಲೋಸುಗ!

ಅನ್ಯಾಯಕ್ಕೆ ಬೆಂಬಲವೇ ?

ಏಪ್ರಿಲ್ 16, 1991ರಂದು ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾದ ನ್ಯಾಯಮೂರ್ತಿ ಪಾಂಡ್ಯನ್ ಮತ್ತು ನ್ಯಾಯಮೂರ್ತಿ ರೆಡ್ಡಿಯಿಬ್ಬರೂ ಸೇರಿ ಕೆಳಗಿನ ಕೋರ್ಟುಗಳಲ್ಲಿ ಅತ್ಯಾಚಾರ ಅಪರಾಧ ಸಾಬೀತಾಗಿದ್ದ ಅಪರಾಧಿಯೊಬ್ಬನನ್ನು ಬಂಧ ವಿಮುಕ್ತನೆಂಬ ತೀರ್ಪು ನೀಡಿದರು. ಐದು ವರ್ಷದ ಹುಡುಗಿಯ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಿದ ಆರೋಪ ಹೊತ್ತ ಅಪರಾಧಿಗೆ ಕೆಳಗಿನ ಕೋರ್ಟುಗಳಲ್ಲಿ ಮರಣ ಶಿಕ್ಷೆಯ ತೀರ್ಪು ನೀಡಲಾಗಿತ್ತು. ಈ ಇಬ್ಬರೂ ನ್ಯಾಯಾಧೀಶರಲ್ಲಿ ಒಬ್ಬರಾದ ನ್ಯಾಯಮೂರ್ತಿ ಪಾಂಡಿಯನ್, ಒಂದು ವರ್ಷದ ಹಿಂದೆ ಪೋಲೀಸ್ ಪೇದೆಗೆ ಅತ್ಯಾಚಾರಕ್ಕಾಗಿ ವಿಧಿಸಿದ್ದ 10 ವರ್ಷಗಳ ಶಿಕ್ಷೆಯನ್ನು 5 ವರ್ಷಕ್ಕೆ ಕಡಿಮೆ ಮಾಡಿದ್ದರು (ಸುಮನ್ ರಾಣಿ ಪ್ರಕರಣ). ಆದ್ದರಿಂದ ಇಲ್ಲಿ ಒಬ್ಬಿಬ್ಬರು ನ್ಯಾಯಮೂರ್ತಿಗಳನ್ನು ಕುರಿತಂತೆ ಬೆಟ್ಟು ಮಾಡಿ ತೋರಿಸುವುದಕ್ಕಿಂತ ಒಟ್ಟಾರೆಯಾಗಿ ನ್ಯಾಯಾಲಯಗಳು ಅಪರಾಧಿಗಳಿಗೆ ತೋರಿಸುವ ಪಕ್ಷಪಾತ ಧೋರಣೆಯನ್ನು ಕುರಿತಂತೆ ಅಖಿಲ ಭಾರತ ಜನವಾದಿ ಮಹಿಳಾ ಸಂಘವು ಸುಪ್ರೀಂ ಕೋರ್ಟಿನ ಮುಖ್ಯನ್ಯಾಯಾಧೀಶರಿಗೆ ಮನವಿಯೊಂದನ್ನು ಸಲ್ಲಿಸಿತು. ಆ ಮನವಿಯ ಪತ್ರ ನ್ಯಾಯಾಲಯಗಳ ಕಾರ್ಯ ವೈಖರಿಯ ಬಗ್ಗೆ ಎಲ್ಲರ ಕಣ್ಣು ತೆರೆಸುತ್ತದೆ,

ಮುಖ್ಯ ನ್ಯಾಯಾಧೀಶರು
ಸುಪ್ರೀಂ ಕೋರ್ಟು
ನವದೆಹಲಿ

ಮಾನ್ಯರೇ.

ಅಖಿಲ ಭಾರತ ಜನವಾದಿ ಮಹಿಳಾ ಸಂಘದ ಪರವಾಗಿ ಬೇಸರದಿಂದ ಹಾಗೂ ಆಕ್ರೋಶದಿಂದ ಈ ಮನವಿಯನ್ನು ಸಲ್ಲಿಸುತ್ತಿದ್ದೇವೆ, 1988ರಲ್ಲಿ ಐದು ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ನಡಸಿ ಕೊಲೆಗೈದ ಅಪರಾಧಕ್ಕಾಗಿ ಒರಿಸ್ಸಾದ ಸೆಷನ್ಸ್ ಕೋರ್ಟು ಮತ್ತು ಹೈ ಕೋರ್ಟುಗಳಲ್ಲಿನ ತೀರ್ಪಿನಿಂದಾಗಿ ಮರಣ ಶಿಕ್ಷೆಗೆ ಅರ್ಹನಾದವನನ್ನು ಸುಪ್ರೀಂ ಕೋರ್ಟು ಬಂಧ ಮುಕ್ತನನ್ನಾಗಿಸಿದೆ (ಜವಾಹರ ದಾಸ್/ಒರಿಸ್ಸಾದ ರಾಜ್ಯ ಸರ್ಕಾರ, ಕ್ರಿಮಿನಲ್ ಅಪೀಲ್ ನಂ. 276. 1991).

ಸಮಾಜದಲ್ಲಿ ಆಳವಾಗಿ ಬೇರೂರಿರುವ ಲೈಂಗಿಕ ಅಸಮಾನತೆಯ ನೀತಿಯಿಂದಾಗಿ ಇಂತಹದೊಂದು ತೀರ್ಪನ್ನು ನೀವು ಕೊಟ್ಟಿರುವುದು ವಿದಿತವಾಗುತ್ತದೆ. ಮಹಿಳೆಯರ ದೌರ್ಜನ್ಯಕ್ಕೆ ಕಾರಣರಾದ ಅಪರಾಧಿಗಳು ಶಿಕ್ಷೆಯಿಂದ ಮುಕ್ತರಾಗುತ್ತಿರುವುದಕ್ಕೆ ಇದೊಂದು ಅಪರೂಪದ ಘಟನೆಯೇನಲ್ಲ. ತನ್ನನ್ನು ಸಮರ್ಥಿಸಿಕೊಳ್ಳಲಾರದ ಚಿಕ್ಕ ಹುಡುಗಿಯ ಅಸಹಾಯಕತೆಯ ಲಾಭದಿಂದ ಇಲ್ಲಿ ಅಪರಾಧಿ ಶಿಕ್ಷೆಯಿಂದ ಮುಕ್ತನಾಗಿದ್ದಾನೆ. ಕಳೆದ ವರ್ಷ ಇಂತಹುದೇ ಪ್ರಕರಣವೊಂದರಲ್ಲಿ ಅತ್ಯಾಚಾರದ ಅಪರಾಧಿಗೆ ಕೆಳಗಿನ ಕೋರ್ಟುಗಳು ವಿಧಿಸಿದ್ದ ಹತ್ತು ವರ್ಷದ ಶಿಕ್ಷೆಯನ್ನು ಐದು ವರ್ಷಕ್ಕೆ ಇಳಿಸಿದ್ದಿರಿ. ಆದ್ದರಿಂದ ನ್ಯಾಯಾಲಯದಲ್ಲಿ ನ್ಯಾಯ ಅಪೇಕ್ಷಿಸುವುದು ವ್ಯರ್ಥ ಪ್ರಯತ್ನ ಎಂಬ ಅಭಿಪ್ರಾಯ ಜನಸಾಮಾನ್ಯರಲ್ಲಿ ಮೂಡಿದೆ. ಸುಪ್ರೀಂ ಕೋರ್ಟು ಈ ಪ್ರಕರಣದಲ್ಲಿ ಕೊಟ್ಟಿರುವ ತೀರ್ಪನ್ನು ಗಮನಿಸಿದಾಗ ಸಾಮಾನ್ಯ ಜನತೆ ಇಂತಹದೊಂದು ತೀರ್ಮಾನಕ್ಕೆ ಬಂದರೆ ಆಶ್ಚರ್ಯವೇನಿಲ್ಲ.

ಒರಿಸ್ಸಾದ ಸೆಷನ್ಸ್ ಕೋರ್ಟು ಮತ್ತು ಹೈಕೋರ್ಟು ಅಪರಾಧಿಯ ಅಪರಾಧವನ್ನು ಸಾಭೀತು ಪಡಿಸುವ ಸಾಕ್ಷಿ

ಗಳನ್ನು ಸರಿಯಾಗಿ ಗಮನಿಸಿ ಪರಿಶೀಲಿಸಿವೆ. ಆದರೆ ಸುಪ್ರೀಂ ಕೋರ್ಟು ಅಪರಾಧಕ್ಕೆ ಸಂಬಂಧಪಡದ ಕೆಲವೊಂದು ತಾಂತ್ರಿಕ ಅಂಶಗಳನ್ನು ಆಧರಿಸಿ ತೀರ್ಪು ನೀಡಿದೆ.

ಕೆಲವೊಂದು ಅಂಶಗಳನ್ನು ಈ ಕೆಳಗೆ ಕೊಡುತ್ತೇವೆ ;

1. ಆರೋಪಿಯು ಮೈನರ್ ಹುಡುಗಿಯನ್ನು ತನ್ನೊಡನೆ ಕರೆದುಕೊಂಡು ಹೋದ ಎಂಬ ಅಂಶವನ್ನು ಮತ್ತು ಪೋಲೀಸ್ ಪೇದೆ PW-2ನೊಂದಿಗೆ ಹುಡುಗಿಯಿದ್ದಳು ಎಂಬ ಅಂಶವನ್ನು ಅಂಗಡಿಯವನು ಹೇಳಿದರೂ, ಈ ವಾದವನ್ನು ತಳ್ಳಿಹಾಕುವುದು ಒಂದು ಸಣ್ಣ ಕ್ಷುಲ್ಲಕ ಕಾರಣಕ್ಕೆ; ಆ ಚಿಕ್ಕ ಹುಡುಗಿಯ ಹೆಸರನ್ನು PW–2 ಹೇಳಿಲ್ಲ. ಜೊತೆಗೆ ಪೋಲೀಸ್ ಪೇದೆ ಹೇಳಿದ PW–2 ಹುಡುಗಿಯನ್ನು ಹಿಂದಕ್ಕೆ ಟ್ರಕ್‌ನಲ್ಲಿ ಕಳುಹಿಸಿದೆ ಎಂಬ ವಿರೋಧಾಬಾಸದ ಹೇಳಿಕೆಯನ್ನೂ ನ್ಯಾಯಾಲಯ ಒಪ್ಪಿಕೊಂಡಿದೆ. ಆದರೆ ಕೆಳಗಿನ ನ್ಯಾಯಾಲಯಗಳೆರಡೂ ಆರೋಪಿಯ ಈ ಹೇಳಿಕೆಗಳಲ್ಲಿ ಸತ್ಯಾಂಶವಿಲ್ಲವೆಂದು ತಳ್ಳಿಹಾಕಿವೆ,

2. ಎರಡೂ ನ್ಯಾಯಾಲಯಗಳು ಆರೋಪಿಯೆ ತೋರಿಸಿದ ನಂತರ ಸತ್ತ ಮಗುವಿನ ದೇಹವನ್ನು ಗದ್ದೆಯ ಬಳಿಯಿಂದ ತಂದುದಾಗಿ ಒಪ್ಪಿಕೊಂಡಿವೆ. ಆದರೆ ಸುಪ್ರೀಂ ಕೋರ್ಟು ಮಾತ್ರ ಕ್ಷುಲ್ಲಕವಾದ ಹಾಗೂ ಅಸಂಗತವಾದ ಕಾರಣಗಳನ್ನೊಡ್ಡಿ ತನ್ನ ತೀರ್ಪಿನಲ್ಲಿ ಮಗುವಿನ ಹೆಣವನ್ನು ಕಂಡುಹಿಡಿದು ತರುವಲ್ಲಿ ಆರೋಪಿಯ ಪಾತ್ರವನ್ನು ಎತ್ತುವುದೇ ಇಲ್ಲ. ಅಷ್ಟೇ ಅಲ್ಲ, ಇದಕ್ಕೆ "ಪಂಚನಾಮ" ಕೂಡ ಆಗಿಲ್ಲದಿರುವುದನ್ನು ಗಮನಿಸುವ ಉಚ್ಚ ನ್ಯಾಯಾಲಯ ಪಂಚನಾಮೆಯು ಸಾಮಾನ್ಯವಾಗಿ ನಡೆಯಲ್ಪಡುತ್ತದೆಯೇ ಹೊರತು ಅದು ಆಗಲೇಬೇಕೆಂದೇನಿಲ್ಲ ಎಂಬ ಅಭಿಪ್ರಾಯ ಪಟ್ಟಿದೆ, ತಂದೆಯು ಕೊಡುವ ಸಾಕ್ಷಿಗಳನ್ನು ಸುಪ್ರೀಂ ಕೋರ್ಟು ಗಮನಿಸಲಿಲ್ಲದಿರುವುದಲ್ಲದೆ ಆ ಸಂದರ್ಭದಲ್ಲಿ ತಾಯಿಯ ಗೈರು ಹಾಜರಿಯನ್ನು ಎತ್ತಿ ತೋರಿಸಿದೆ. (ಆದರೆ ಮಗುವಿನ ತಾಯಿ ಒಂದು ತಿಂಗಳ ಬಾಣಂತಿಯಾದ್ದರಿಂದ ಬರಲಾಗದ್ದರ ಅನಿವಾರ್ಯತೆಯನ್ನು ಗಮನಿಸಿಲ್ಲ),

3. ವೈದ್ಯಕೀಯ ಸಾಕ್ಷಿಯನ್ನು ವಿಶ್ಲೇಷಿಸಿರುವ ರೀತಿ ಆಶ್ಚರ್ಯಕರವಾದುದಷ್ಟೇ ಅಲ್ಲ. ಆತಂಕಕಾರಿಯೂ ಹೌದು. ಆರೋಪಿಯು ಆ ಮಗುವಿನೊಂದಿಗೆ ಅತ್ಯಾಚಾರ ನಡೆಸಿದ್ದಾನೆನ್ನುವುದಕ್ಕೆ ಯಾವ ವೈದ್ಯಕೀಯ ಸಾಕ್ಷ್ಯಾಧಾರಗಳು ದೊರೆಯುವುದಿಲ್ಲವಾದ ಕಾರಣ, ಆರೋಪಿಯು ಆ ಕೃತ್ಯ ನಡೆಸಿದ್ದಾನೆಂದು ಹೇಳಲಾಗದು. ಒಂದು ದಿನದ ನಂತರ ಸಂಭೋಗ ನಡೆದಿತ್ತೆಂದು ರುಜುವಾತು ಪಡಿಸುವುದು ಸಾಧ್ಯವಿಲ್ಲವೆಂಬುದನ್ನು ಯಾರಾದರೂ ಒಪ್ಪಲೇಬೇಕು. ಗುಪ್ತಾಂಗಗಳ ಮೇಲೆ ಉಂಟು ಮಾಡಿದ ಗಾಯದ ಬಗೆಗಾಗಲೀ ಮಗುವಿನ ಒಳ ವಸ್ತ್ರದ ಮೇಲಿದ್ದ ರಕ್ತದ ಗುರುತಿಗಾಗಲೀ ದೇಹದ ಮೇಲಿನ ಹಲ್ಲಿನ ಗುರುತಿಗಾಗಲಿ ನ್ಯಾಯಾಲಯ ಯಾವ ಪ್ರಾಮುಖ್ಯತೆಯನ್ನೂ ಕೊಟ್ಟಿಲ್ಲ. ಮಗುವಿನ ವಸ್ತ್ರದ ಮೇಲಿನ ರಕ್ತದ ಕಲೆಗಳು ಅವಳ ದವಡೆಯ ಹುಣ್ಣಿನ ನೋವಿನಿಂದಾದುದು ಎಂಬ ಆರೋಪಿಯ ಸಾಕ್ಷ್ಯವನ್ನು ಸುಪ್ರೀಂ ಕೋರ್ಟು ಸುಮ್ಮನೆ ಒಪ್ಪಿಕೊಂಡಿದೆ.

ಸುಪ್ರೀಂ ಕೋರ್ಟಿನ ತೀರ್ಪಿನ ಉಳಿದ ಹಲವಾರು ವಿಷಯಗಳನ್ನು ಕುರಿತು ಕಟು ಟೀಕೆ ಮಾಡಲು ಅವಕಾಶವಿದೆ. ಅಲ್ಲದೆ ಸಾಕ್ಷ್ಯಗಳನ್ನು ಸಂಗ್ರಹಿಸುವಲ್ಲಿ ಕೂಡ ಅನೇಕ ಕೊರತೆಗಳಾಗಿವೆ, ಆದರೆ ನ್ಯಾಯಾಲಯ ತನ್ನ ತೀರ್ಪು ನೀಡುವಾಗ ಈ ಎಲ್ಲ ಅಂಶಗಳನ್ನು ಏಕೆ ಗಮ ಗಮನಿಸಲಿಲ್ಲ? ಕೆಳಗಿನ ನ್ಯಾಯಾಲಯಗಳಲ್ಲಿ "ಘೋರ" ವಾದ, "ಅಮಾನುಷ"ವಾದ ಕೃತ್ಯವೆಂದು ತೀರ್ಪಿನಲ್ಲಿ ವ್ಯಕ್ತವಾದುದ್ದನ್ನು, ಉಚ್ಚ ನ್ಯಾಯಾಲಯ ಹೇಗೆ ತಳ್ಳಿಹಾಕಿತು? ಪ್ರಕರಣದ ತನಿಖೆಯನ್ನು ಕೂಲಂಕುಷವಾಗಿ ನಡೆಸಿದ ತನಿಖಾಧಿಕಾರಿ ಸುಪ್ರೀಂ ಕೋರ್ಟಿನ ತೀರ್ಪಿನಿಂದಾಗಿ ಸುಳ್ಳನೆನಿಸಿಕೊಂಡನೇ? ಈ ತೀರ್ಪು ರಾಜ್ಯದ ವಿವಿಧ ನ್ಯಾಯಾಲಯಗಳಿಗೆ ಯಾವ ಸಂದೇಶ ನೀಡುತ್ತದೆ?.

ನಾವು ಈಗಲೂ ನಿಮ್ಮನ್ನು ಈ ತೀರ್ಪನ್ನು ಮತ್ತೊಮ್ಮೆ ಪರಿಶೀಲಿಸಿ ನ್ಯಾಯ ದೊರಕಿಸಿಕೊಡಬೇಕೆಂದು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತೇವೆ.

ವಂದನೆಗಳೊಂದಿಗೆ,

ವಿಶ್ವಾಸಿ,

ಬೃಂದಾ ಕಾರಂತ್ (ಕಾರ್ಯದರ್ಶಿ)
ಕಾರ್ಯಕಾರಿ ಸಮಿತಿ ಸದಸ್ಯೆಯರು
ಅಖಿಲ ಭಾರತ ಜನವಾದಿ ಮಹಿಳಾ ಸಂಘ

(ಕೃಪೆ ; ವಿಮೆನ್ಸ್ ಈಕ್ವಾಲಿಟಿ)

ಗುಲಾಮಗಿರಿಯಿಂದ ವಿಮೋಚನೆ

ಐರ್ಲೆಂಡಿನ ವಿಲ್ಲಿಯಂ ಥಾಂಸನ್ (1775-1833) ಸದಾ ಕೈತಾಪಿ ಜನರ ದಾರಿದ್ರ್ಯ ಮತ್ತು ಅಸಮಾನತೆಯ ಬಗೆಗೆ ಚಿಂತಿಸುತ್ತಿದ್ದವರು. ಅದೇ ರೀತಿ ಮಹಿಳೆಯರು ಸಾಂಸಾರಿಕ ಗುಲಾಮಗಿರಿಯಲ್ಲಿ ಸಿಕ್ಕಿಬಿಟ್ಟಿದ್ದಾರೆ. ಅವರ ವಿಮೋಚನೆ ಪ್ರಯತ್ನ ನಡೆಯಬೇಕು ಎಂದು ವಾದಿಸುತ್ತಿದ್ದರು. ಆರ್ಥಿಕ ಸ್ಥಿತಿಗತಿ, ನೀತಿ ನಿರೂಪಣೆ ಬಿಂಬಿಸುವ ಗ್ರಂಥವನ್ನು ಅವರು ರಚಿಸಿದ್ದಾರೆ "ಸೊತ್ತು ವಿತರಣೆ ತತ್ವದ ಬಗೆಗೆ ವಿಚಾರಣೆ" ಎಂಬ ಗ್ರಂಥದ ಒಂದು ಅಧ್ಯಾಯದ ಭಾವಾನುವಾದವನ್ನು ಇಲ್ಲಿ ಕೊಡಲಾಗಿದೆ. ಕನ್ನಡಕ್ಕೆ ಎನ್. ಉದಯ್ ಕುಮಾರ್.

ಹೆಣ್ಣು ಮುಗ್ಧಳು, ಅತ್ಯಂತ ಪ್ರೀತಿ ಪಾತ್ರಳಾದವಳು ಹಾಗೂ ಮನುಕುಲದ ಅತ್ಯಂತ ಉನ್ನತ ವರ್ಗದವಳು ಎಂಬ ನಯವಂಚನೆಯ ಮಾತುಗಳನ್ನಾಡುತ್ತಲೇ ಜಗತ್ತಿನ ಅರ್ಧದಷ್ಟು ಮಹಿಳಾ ಜನಸಂಖ್ಯೆಯನ್ನು ಸಂಸಾರವೆಂಬ ಗುಲಾಮಗಿರಿಗೆ ದೂಡಲಾಗಿದೆ. ಈ ಪರಿಸ್ಥಿತಿ ನಿರಂಕುಶ ಅಧಿಕಾರವಿರುವ ರಾಜ್ಯಗಳಿಂದ ಹಿಡಿದು ಗಣರಾಜ್ಯಗಳ ವರೆಗೂ ಒಂದೇ.

ಪುರುಷನಿಗೆ ಮಹಿಳೆ ಹೇಗೆ ಅತ್ಯಂತ ಪ್ರೀತಿ-ವಾತ್ಸಲ್ಯ ಸುಖ ಸಂತೋಷಗಳನ್ನು ನೀಡುವ "ಕ್ರಿಮಿ"ಯೋ ಹಾಗೆಯೇ, ಮಹಿಳೆಗೆ ಪುರುಷನೂ ಸಹ; ಆದುದರಿಂದ ಪ್ರೀತಿ-ಪ್ರೇಮ, ಸುಖ-ಸಂತೋಷಗಳಲ್ಲಿ ಒಬ್ಬರಿಗೊಬ್ಬರು ಆಸರೆ ಅದೇ ರೀತಿ ದುಃಖ-ದಮನಗಳಲ್ಲೂ ಸಮತೋಲನ ವಿರಬೇಕಾದುದು ಸಮಂಜಸ.

ಪ್ರಕೃತಿದತ್ತವಾಗಿಯೇ ಮಹಿಳೆ ಪುರುಷನಿಗಿಂತ ಕಡಿಮೆ ಶಕ್ತಿಯನ್ನು ಪಡೆದಿರುವಳು. ಹಾಗೆಯೇ ಪುರುಷನಿಗಿಲ್ಲದ ಕೆಲವು ದೈಹಿಕ ಅನಾನುಕೂಲಗಳನ್ನು ಮತ್ತು ಎಡರು-ತೊಡರುಗಳನ್ನು ಪಡೆದಿದ್ದಾಳೆ ಈ ಸಹಜ ತೊಂದರೆಗಳ ನಿವಾರಣೆಗೆ ಪ್ರಯತ್ನಿಸುವುದು ಅಥವಾ ಸಹಾಯ ಮಾಡುವುದು ಒಂದೆಡೆ ಇರಲಿ, ಇದರೊಂದಿಗೆ ಕೃತಕ ಅಥವಾ ಮನುಷ್ಯ ನಿರ್ಮಿತ ತೊಂದರೆಗಳನ್ನು ಸಹ ಪುರುಷ ಪ್ರಧಾನ ಸಮಾಜವು ಸೇರಿಸುತ್ತಿದೆ. ಆದುದರಿಂದ ಪುರುಷರಿಗೆ ಸುಖ-ಸಂತೋಷಗಳು ಎಲ್ಲರಿಗೂ ಸಮಾನವಾಗಿ ಬೇಕು ಎಂಬುದು ಹೇಗೆ ಗೊತ್ತಾಗುವುದು?

ಸಮಾನ ಹಕ್ಕುಗಳಿಂದ ಮಹಿಳೆಯರನ್ನು ದೂರವಿರಿಸಿ ಮನುಕುಲದ ಎಲ್ಲ ಸುಖ-ಸಂತೋಷ ಜ್ಞಾನ-ವಿಜ್ಞಾನಗಳನ್ನು ತನ್ನ ಸಾರ್ವಭೌಮತ್ವದ ತೆಕ್ಕೆಗೊಳಪಡಿಸಿಕೊಂಡಿದ್ದಾನೆ ಪುರುಷ. ಜ್ಞಾನದ ಕಾರ್ಯವ್ಯಾಪ್ತಿ ಏನೇ ಆಗಿರಬಹುದು, ಅದು ತಕ್ಷಣದ ಬೌದ್ಧಿಕ ಸಾಂಸ್ಕೃತಿಕ ಕ್ರಿಯೆಯ ಸಂತುಷ್ಟತೆ ಆಗಿರಲಿ, ಮನಸ್ಸಿನ ಮೇಲೆ ಪ್ರಭಾವ ಬೀರುವ ಉಪಯುಕ್ತ ಮೂಲವಾಗಿರಲಿ ಅಥವಾ ಹೊಸ ಹೊಸ ಸಂಪತ್ತನ್ನು ಶೇಖರಿಸುವುದರ ಮುಖಾಂತರ ಗಳಿಸುವ ತೃಪ್ತಿಯಾಗಿರಲಿ ಅದರ ಪರಿಣಾಮವು ಮಾತ್ರ ವಿಷಯಾಸಕ್ತತೆಯ ತ್ಯಾಗವಾಗಿರಬೇಕು. ಈ ತರ್ಕ ವಿತರ್ಕಗಳು ಏನೇ ಇದ್ದರೂ ಮಾನವ ಸಮುದಾಯದ ಅರ್ಧದಷ್ಟು ಸಂಪತ್ತನ್ನು ಉದ್ದೇಶಪೂರ್ವಕವಾಗಿ ಸಮುದ್ರಕ್ಕೆ ಅರ್ಪಿಸುತ್ತಿದ್ದೇವೆ.

ಮೊದಲೇ ಪುರುಷ ಪ್ರಧಾನ ಸಮಾಜ. ಜ್ಞಾನವೆಲ್ಲಾ ನಮ್ಮ ಸ್ವಾಧೀನ ಎಂಬ ಅಹಂಭಾವ ಇದರೊಂದಿಗೆ ಎಳೆಯ ವಯಸ್ಸಿನಲ್ಲಿ ಶಾಲಾ ಶಿಕ್ಷಕರು ಸತ್ಯಾಂಶಗಳನ್ನು ವೈಚಾರಿಕತೆಯನ್ನು ಮೂಲೆಗೊತ್ತು ಅಸಂಬದ್ಧ ಅರ್ಥ

ಸತ್ಯಗಳೊಂದಿಗೆ. ನಗ್ನ ಸುಳ್ಳುಗಳನ್ನು ಮಕ್ಕಳ ಮನಸ್ಸಿನಲ್ಲಿ ಗಾಢವಾಗಿ ಬೇರೂರುವಂತೆ ಮಾಡುತ್ತಾರೆ, ನಂತರ ಅವರ ಮುಗ್ಧತೆಯನ್ನು ಹೋಗಲಾಡಿಸಲು ನಿಜವಾದ ವಾಸ್ತವಂಶಗಳ ತಿಳುವಳಿಕೆ ಮೂಡಿಸುವ ಬದಲಾಗಿ ಕಾನೂನಿನ ನಿರ್ದೇಶನಗಳನ್ನು ಹೊರಡಿಸಿದರೆ ಅವು ಏನೂ ಪರಿಣಾಮ ಬೀರಲಾರವು.

ಪುರುಷ ತನ್ನ ಬೌದ್ಧಿಕ ಔನ್ನತ್ಯದಿಂದ ಪ್ರಕೃತಿಯ ಅತ್ಯಂತ ಆತ್ಮೀಯ ಹಾಗೂ ಮಧುರ ಸಂಬಂಧಗಳಾದ ಹೆಣ್ಣು-ಗಂಡಿನ ಸಂಬಂಧಗಳನ್ನು ತನ್ನ ಸುಖ-ಸಂತೋಷಕ್ಕಾಗಿ ಬಳಸಿಕೊಳ್ಳುವುದರಲ್ಲಿ ನಿಪುಣ.

ಆದರೆ ಮಹಿಳೆ ತನ್ನ ಅಜ್ಞಾನ ಹಾಗೂ ಕೀಳರಿಮೆಯಿಂದ ಪುರುಷರು ಗಳಿಸಿರುವ ಜ್ಞಾನವನ್ನು ತಪ್ಪೆ-ಒಪ್ಪೇ ಎಂದ ಪ್ರಶ್ನಿಸಲಾರಳು ಮತ್ತು ವಸ್ತು ವಿಷಯವಾಗಿ ಆಲೋಚಿಸಲಾರಳು. ಅಂಥ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡು ಬಿಟ್ಟಿದ್ದಾಳೆ.

ಸಾರ್ವಜನಿಕ ಜೀವನದ ಬಗ್ಗೆ ಮತ್ತು ರಾಷ್ಟ್ರೀಯ ವಿಷಯಗಳ ಆಸಕ್ತಿಗಳಂತಹ ಬೌದ್ಧಿಕ ವಿಚಾರಗಳಲ್ಲಿಭಾಗವಹಿಸಲು ಅವಕಾಶವಿಲ್ಲದ ಮಹಿಳೆಯರು ತಕ್ಷಣದ ಸಾಂಸಾರಿಕ ಆಗು ಹೋಗುಗಳ ಬಗ್ಗೆ ಮತ್ತು ಭಾವನಾತ್ಮಕ ವಿಷಯಗಳಲ್ಲೇ ತಮ್ಮನ್ನು ತೊಡಗಿಸಿಕೊಂಡು ವಿಸ್ತೃತ ಜ್ಞಾನ ಹಾಗೂ ಔದಾರ್ಯಗಳ ಬದಲು ಸ್ವಾರ್ಥ, ತಕ್ಷಣದ ಸಂತೋಷ, ದೂರ ದೃಷ್ಟಿಯ ಕೊರತೆ, ಮೋಹಕತೆ ಮುಂತಾದವುಗಳಿಗೆ ಬಲಿಯಾಗುತ್ತಾರೆ ಅಥವಾ ಅವೇ ಮೊದಲಿನವುಗಳನ್ನು ಗೆಲ್ಲುತ್ತವೆ ಎಂದರೆ ತಪ್ಪಾಗಲಾರದು.

ಮಹಿಳೆಯರ ಅಜ್ಞಾನ ಮತ್ತು ಕೀಳರಿಮೆಯೇ ಆಕೆಯನ್ನು ಕೆಳಗಿನ ಸ್ಥಾನದಲ್ಲಿಟ್ಟು ಪುರುಷರ ವಿಸ್ತೃತ ಜ್ಞಾನದ ಬಗ್ಗೆ ಹೆಮ್ಮೆ ಪಡುವಂತೆ ಪ್ರೇರೇಪಿಸುತ್ತಾರೆ.

ಮಾನವ ಜನಾಂಗದ ಅರ್ಧದಷ್ಟು ಜನರನ್ನು ಸಾಂಸಾರಿಕ ಗುಲಾಮಗಿರಿಯಲ್ಲಿ ಇಟ್ಟಿರುವ ಈ ಸಾರ್ವತ್ರಿಕ ಸಂಸ್ಥೆಗಳ ಅನಿಷ್ಟ ಮತ್ತು ದುಷ್ಕೃತ್ಯಗಳಿಗೆ ತಕ್ಕ ಶಾಸ್ತಿಯೆಂದರೆ ಅವುಗಳನ್ನು ಬೇರು ಸಮೇತ ಕಿತ್ತುಹಾಕುವುದೇ ಆಗಿದೆ.

ಈ ಮೇಲಿನ ಕ್ರಿಯೆಗಳನ್ನು ಕೈಗೊಂಡಲ್ಲ ಜ್ಞಾನ ಮತ್ತು ಸುಖ ಸಂತೋಷಗಳಲ್ಲಿ ನೋಡಿ ಅಭಿವೃದ್ಧಿ ಸಾಧ್ಯ, O

WITH BEST COMPLIMENTS FROM :

Prashanth Cylinders (P) Ltd.,

35 B, Veerasandra Industrial Area, 19th KM, Hosur Road
BANGALORE-562 158

Reg. No. MAG (5) PRC. DECL 036/86-87

BOOK-POST PERIODICALS

To,

If undelivered please return to :

Jagruthi Mahila Adhyayana Kendra
26, 1st Main Road, Vyalikaval
Bangalore-560 003